ಶ್ರೀ ಗಣೇಶ ಶಾರದ ಗುರುಭ್ಯೋ ನಮಃ


# ಶ್ರೀವಿಲ್ಲಿಪುತ್ತೂರ್ ದರ್ಶನ

**ಪಲ್ಲಾಂಡು ಪಲ್ಲಾಂಡು ಪಲ್ಲಾಯಿರತ್ತಾಂಡು ಪಲ ಕೋಡಿ ನೂರಾಯಿರಂ**

**ಮಲ್ಲಾಂಡ ತಿಣ್ತೋಳ್ ಮಣಿವಣ್ಣಾ ! ಉನ್ ಶೇವಡಿ ಶೆವ್ವಿ ತಿರುಕ್ಕಾಪ್ಪು.**

ದೇವರಿಗೇ ದೃಷ್ಟಿ ತಾಗದಿರಲೆಂದು ಮಾಡಿದ ಅಪುರೂಪದ ಮಂಗಳ ಶಾಸನ.

ಸಾಕ್ಷಾತ್ ಶ್ರೀಮನ್ನಾರಾಯಣ ತನ್ನ ವಿಜಯ ಯಾತ್ರೆಯನ್ನು ನೋಡಿ ಸಂಭ್ರಮಿಸಲು ವೈಕುಂಠದಿಂದ ಧರೆಗೆ ಇಳಿದು ಬಂದುದನ್ನು ದರ್ಶಿಸಿ ಧನ್ಯರಾದ ವಿಷ್ಣುಚಿತ್ತರು, ಪರಮಾತ್ಮನಿಗೆ ದೃಷ್ಟಿಯಾಗದಂತೆ, ಅವನು ಸರ್ವದಾ ಸೌಖ್ಯವಾಗಿರಬೇಕೆಂದು ಮಾಡಿದ ವಿಶಿಷ್ಟ ಮಂಗಳಾಶಾಸನ.



ವಿಷ್ಣುಚಿತ್ತರ್ - ಪೆರಿಯಾಳ್ವಾರ್ - ಮಹಾವಿಷ್ಣುವಿನ ದರ್ಶನ, ಸಂದರ್ಶನ ಪಡೆದ ಮಹಾಸಂತ. ಭಗವತ್ ಭಕ್ತಿಯಲ್ಲಿಯೇ ಮುಳುಗಿ ತಮ್ಮ ತನುಮನಗಳನ್ನೆಲ್ಲಾ ಭಗವಂತನಿಗೇ ಅರ್ಪಿಸಿದ ಮಹಾನುಭಾವರಾದ ಆಳ್ವಾರುಗಳಲ್ಲೇ ಪೆರಿಯಾಳ್ವಾರ್ ಎಂಬ ಬಿರುದಾಂಕಿತರು. ಪರಮಾತ್ಮನಿಗೇ ಮುಡಿಪಾಗಿರಿಸಬೇಕಾದ ಕರಣಕಳೇಬರಗಳನ್ನು ದುರುಪಯೋಗ ಪಡಿಸದೇ, ವಿಷವರ್ತುಲವಾಗಿರುವ ಸಂಸಾರದಲ್ಲಿದ್ದೂ ಇಲ್ಲದಂತೆ, ಕಮಲದ ಎಲೆಯ ಮೇಲಿನ ನೀರಿನಂತೆ ವರ್ತಿಸುತ್ತಾ, ಮನುಷ್ಯ ಜನ್ಮವನ್ನು



ಪರಬ್ರಹ್ಮನ ಸಾನ್ನಿಧ್ಯದಲ್ಲಿ ಶಾಶ್ವತವಾಗಿ ಹೋಗಿ ಸೇರಲು ಅದ್ಭುತ ಸಾಧನೆಯಾಗಿ ಮಾಡಿಕೊಂಡು ಆಧ್ಯಾತ್ಮದಲ್ಲಿಯೇ ತಲ್ಲೀನರಾಗಿದ್ದ ಮಹಾನುಭಾವರು, ವಿಷ್ಣುಚಿತ್ತರು.

**ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿಂದ್ರಿಯನಿಗ್ರಹಃ**

**ಸರ್ವಭೂತದಯಾ ಪುಷ್ಪಂ ಕ್ಷಮಾ ಪುಷ್ಪಂ ವಿಶೇಷತಃ ।**

**ಶಾಂತಿ ಪುಷ್ಪಂ ತಪಃ ಪುಷ್ಪಂ ಧ್ಯಾನ ಪುಷ್ಪಂ ತಥೈವಚ**

**ಸತ್ಯಮಷ್ಟವಿಧಂ ಪುಷ್ಪಂ ವಿಷ್ಣೋಃ ಪ್ರೀತಿಕರಂ ಭವೇತ್ ॥**

ಪುಷ್ಪಪ್ರಿಯನಾದ ವಿಷ್ಣುವಿಗೆ, ಅಹಿಂಸಾ, ಇಂದ್ರಿಯನಿಗ್ರಹ, ಸರ್ವಭೂತದಯಾ, ಕ್ಷಮಾ, ಶಾಂತಿ, ತಪಸ್ಸು, ಧ್ಯಾನ, ಸತ್ಯಗಳ ಪಾಲನೆ ಮಾಡುವ ವಿಷ್ಣುಚಿತ್ತರು, ಪ್ರತಿದಿವಸವೂ ತಾವೇ ತೋಟದಲ್ಲಿ ಬೆಳೆಸಿದ ಹೂಗಳನ್ನು ತುಳಸಿಯನ್ನು ಭಗವಂತನಿಗೆ ಅರ್ಪಿಸುವುದೇ ಅವರ ಜೀವನದ ಆನಂದಕರ ಕೈಂಕರ್ಯ. ಗರುಡಾಂಶಸಂಭೂತರೆಂದೇ ಹೇಳಲ್ಪಡುವ ವಿಷ್ಣುಚಿತ್ತರು, ವಿಷ್ಣುವನ್ನು ತನ್ನ ಚಿತ್ತದಲ್ಲಿಯೇ ಇರಿಸಿಕೊಂಡವರೂ ಹಾಗೂ ವಿಷ್ಣುವಿನ ಚಿತ್ತದಲ್ಲಿ ತಾನಿದ್ದು ಪರಮಾತ್ಮನ ಪ್ರಾಬಲ್ಯವನ್ನು ರಾಜನ ಆಸ್ಥಾನದಲ್ಲಿ ಸ್ಥಾಪಿಸಿ ಯಶಸ್ಸನ್ನು ಪಡೆದವರೂ ಹಾಗೂ ಸಾಕ್ಷಾತ್ ಭೂದೇವಿಯನ್ನೇ ಮಗಳನ್ನಾಗಿ ಪಡೆಯುವ ಅರ್ಹತೆಯುಳ್ಳವರು.

**ಗುರುಮುಖಮ್ ಅನದೀಧ್ಯ ಪ್ರಾಹ ವೇದಾನ್ ಅಶೇಷಾನ್**

**ನರಪತಿ ಪರಿಕ್ಲುಪ್ತಮ್ ಶುಲ್ಕಮಾಧಾತು ಕಾಮಃ ।**

**ಶ್ವಶುರಮ್ ಅಮರವಂದ್ಯಮ್ ರಂಗನಾಥಸ್ಯ ಸಾಕ್ಷಾತ್**

**ದ್ವಿಜಕುಲತಿಲಕಂ ತಮ್ ವಿಷ್ಣುಚಿತ್ತಂ ನಮಾಮಿ ॥**

ವಿಷ್ಣುಚಿತ್ತರ ಜನ್ಮಭೂಮಿ ಶ್ರೀವಿಲ್ಲಿಪುತ್ತೂರ್. ಭೃಗು ಮತ್ತು ಮಾರ್ಕಂಡೇಯ ಮಹರ್ಷಿಗಳ ತಪೋಭೂಮಿ. ರಾಕ್ಷಸರ ಉಪದ್ರವದಿಂದ ಮಹರ್ಷಿಗಳನ್ನು ಸಂರಕ್ಷಿಸಿ, ಅವರ ಪ್ರಾರ್ಥನೆಯ ಮೇರೆಗೆ ಆದಿಶೇಷನ ಸುರುಳಿಯಲ್ಲಿ ಆಲದ ಎಲೆಯಮೇಲೆ ಒರಗಿ ನೆಲೆಸಿರುವ ಶ್ರೀಮಹಾವಿಷ್ಣುವಿನ ದಿವ್ಯಧಾಮ. ಕಾಲಾಂತರದಲ್ಲಿ ವಿಲ್ಲಿ ಪುತ್ತರ್ ಎಂಬ ಕಿರಾತಕ ರಾಜರ ಸ್ವಪ್ನದಲ್ಲಿ ಕಂಡ ದಿವ್ಯ ಸ್ವಯಂಭೂ ವಿಗ್ರಹ ವಟಪತ್ರಶಾಯಿ. ಬ್ರಹ್ಮಾಂಡದ ಅಂತ್ಯದಲ್ಲಿ ಮಹಾಪ್ರಳಯದ ಭಯಾನಕ ಸಂದರ್ಭದಲ್ಲಿ ಮಾರ್ಕಂಡೇಯನಿಗೆ ದರ್ಶನವಿತ್ತ ಶ್ರೀಮಹಾವಿಷ್ಣುವಿನ ರೂಪ, ವಟಪತ್ರಶಾಯಿಯ ವೀಕ್ಷಣಾನುಭವವೇ ಪುರುಷಾರ್ಥ. ಅದನ್ನು ಪಡೆಯಲು ಭಗವಂತನೇ ಉಪಾಯ. "ಏಕಃ ಸ್ವಾದುನ ಭುಂಜೇಧಾಃ " ರಸವತ್ತಾದ ಪದಾರ್ಥವನ್ನು ಒಬ್ಬಂಟಿಗರಾಗಿ ತಾವೇ ಅನುಭವಿಸಬಾರದಲ್ಲವೇ? ಭಗವದ್ಗುಣಾನುಭವಕ್ಕಿಂತ

ರಸಭರಿತವಾದುದೇನಿದೆ? ಭಗವನ್ನಾಮ ಸಂಕೀರ್ತನೆ ಮಾಡಿ, ಭಗವತ್ ಕಲ್ಯಾಣ ಗುಣಸಾಗರದಲ್ಲಿ ಮುಳುಗಿ, ಪರಮ ರಸಾಸ್ವಾದ ಮಾಡಬೇಕೆಂಬ ಬಯಕೆ ನಮ್ಮ ನಾದಾರ್ಚನೆಯದು. ಧನುರ್ಮಾಸದಲ್ಲಿ ತಿರುಪ್ಪಾವೈ ಪಾಶುರಗಳನ್ನು ಅನುಸಂಧಾನ ಮಾಡಿದ ಸುಯೋಗದಿಂದ ಒದಗಿದ ದಿವ್ಯ ಅನುಗ್ರಹ **ಶ್ರೀವಿಲ್ಲಿಪುತೂರ್ ಕ್ಷೇತ್ರ ದರ್ಶನ**.

ಶ್ರೀವಿಲ್ಲಿಪುತ್ತೂರ್ ತಿರುಪ್ಪಾವೈ ಕಾವ್ಯದ ಸ್ಫೂರ್ತಿ ಕ್ಷೇತ್ರ.

ಕೇವಲ 30 ಪಾಶುರಗಳಲ್ಲಿ, ಆಡು ಭಾಷೆಯಲ್ಲಿ ಶ್ರೀಕೃಷ್ಣಪರಮಾತ್ಮನು ಭಗವದ್ಗೀತೆಯಲ್ಲಿ ನೀಡಿರುವಂತಹ, ಸರ್ವದೇಶ, ಸರ್ವಕಾಲದ ಸರ್ವಮಾನವರಿಗೂ ಪ್ರಾಪ್ತಿಯಾಗಿರುವ ಉಪದೇಶ; ಅಂದು, ಇಂದು, ಮುಂದೂ ಸಹ ಎಲ್ಲರಿಗೂ ಮಾರ್ಗದರ್ಶನ ಕೊಡುವ ಕೈದೀವಿಗೆ; ಸಕಲ ವೇದಗಳ ಸಾರ; ಯೋಗೇಶ್ವರರ ತತ್ತ್ವವಿಚಾರ; ಗೋದಾದೇವಿಯ ಮೃದು ಮಧುರ ಮುಗ್ಧಹೃದಯದಿಂದ ಹೊರಹೊಮ್ಮಿದ ಕವಿತಾಸಾರ; **ತಿರುಪ್ಪಾವೈ**. ಭಗವದ್ಭಕ್ತಿಯ ಹಿರಿಮೆಯನ್ನು ತನ್ನ ದಿವ್ಯ ಪ್ರಬಂಧಗಳಿಂದ ಜನರಿಗೆ ಉಪದೇಶಮಾಡಲು ಧರೆಗಿಳಿದ ಶ್ರೀಮನ್ನಾರಾಯಣನ ಪತ್ನಿ ಭೂದೇವಿ.

ತುಲಸೀ ನಂದನವನದಲ್ಲಿ, ಜನಕಮಹಾರಾಜರಿಗೆ ಸೀತಾದೇವಿಯು ಲಭ್ಯವಾದಂತೆ, ವಿಷ್ಣುಚಿತ್ತರ ಕೈಂಕರ್ಯಕ್ಕೆ ಮೆಚ್ಚಿ ಭಗವಂತನು ನೀಡಿದ ಪ್ರಸಾದ, ಅಯೋನಿಜೆ, ಸರಳ ಮತ್ತು ದೈವಿಕ ಪರಿಸರದಲ್ಲಿ ಜ್ಞಾನ ಭಕ್ತಿ ವೈರಾಗ್ಯಗಳಿಂದ ಬಾಲ್ಯದಲ್ಲಿಯೇ ಪಕ್ವವಾದ ಮುದ್ದುಕುವರಿ **ಗೋದಾದೇವಿ**.

ಗೋದಾದೇವಿ, ವಿಷ್ಣುಚಿತ್ತರು, ನಮ್ಮಾಳ್ವಾರ್, ಕುಲಶೇಖರ ಆಳ್ವಾರ್, ತಿರುಮಳಿಸೈ ಆಳ್ವಾರ್ ಮುಂತಾದ ಆಳ್ವಾರ್ ಸಮುದಾಯದಿಂದ ಕೊಂಡಾಡಿಸಿಕೊಂಡು, ಶೇಷನ ಮೇಲೇರಿರುವ ವಟಪತ್ರಶಾಯಿಯ ಸನ್ನಿಧಿ ಇರುವ ದಿವ್ಯಕ್ಷೇತ್ರ ಶ್ರೀವಿಲ್ಲಿಪುತ್ತೂರು. ಶ್ರೀವಿಲ್ಲಿಪುತ್ತೂರಿನ ಭೂಸ್ಪರ್ಶವಾಗುತ್ತಿದ್ದಂತೆಯೇ ನಾವೂ ಗೋದಾದೇವಿಯ ಸಖಿಯರಾಗಿ, ಬೆಳಗಿನ ಜಾವದಲ್ಲಿ ಮನೆಗಳಲ್ಲಿ ನಿದ್ರಿಸುತ್ತಿರುವವರನ್ನು ಎಬ್ಬಿಸಿ, ಜೊತೆಯಲ್ಲಿ ಕರೆದುಕೊಂಡು ಹೋಗಿ, ವಟಪತ್ರಶಾಯಿಯಾಗಿ ಮಂದಿರದಲ್ಲಿ ಮಲಗಿರುವ ಶ್ರೀಕೃಷ್ಣಪರಮಾತ್ಮನಿಗೆ ಸುಪ್ರಭಾತ ಹೇಳಿ, ಅವನಲ್ಲಿ ಪ್ರೀತಿಯಿಂದ ಕೂಡಿದ ಕೈಂಕರ್ಯವನ್ನು ಅನುಗ್ರಹಿಸೆಂದು ಪ್ರಾರ್ಥಿಸುತ್ತಿರುವ ಕೈಂಕರ್ಯ ಭಾವನೆ. ಅವಳೊಂದಿಗೆ ಅವಳ ನಂದಗೋಕುಲವಾದ ಶ್ರೀವಿಲ್ಲಿಪುತ್ತೂರಿನಲ್ಲಿ ಸಂಭ್ರಮಿಸುತ್ತಿರುವ ಮಧುರಾನುಭೂತಿ. ಸುಂದರ ರಂಗವಲ್ಲಿಗಳಿಂದ, ತಿರುಪ್ಪಾವೈ ಮಧುರ ಘೋಷದಿಂದ, ತುಲಸೀ ಪರಿಮಳದಿಂದ ಕೂಡಿದ ಧಾರ್ಮಿಕ ವೈದಿಕ ಪರಿಸರದಿಂದ ಸಹಜವಾಗಿ ಮೂಡುತ್ತಿರುವ ವಿಷ್ಣುಭಕ್ತಿ, ಆಳ್ವಾರುಗಳಲ್ಲಿ ಕಿರಿಯ ಮತ್ತು ಪ್ರಿಯಳಾದ ಗೋದಾದೇವಿಯು ನಡೆದ ಮೋಕ್ಷದ ಹಾದಿಯಲ್ಲಿ ಪಯಣಿಸುತ್ತಿರುವ ಭಾವಕಲ್ಪನೆ.

ವಿಷ್ಣುಚಿತ್ತರಿಂದ ಪರಿಪರಿಯಾಗಿ ವರ್ಣಿಸಲ್ಪಡುತ್ತಿರುವ ಭಗವಂತನ ಕಲ್ಯಾಣಗುಣಗಳನ್ನು ಕೇಳುತ್ತಾ ಕೇಳುತ್ತಾ, ಪರಮಾತ್ಮನಲ್ಲಿ ಭಕ್ತಿಯು ಬೆಳೆಯುತ್ತಾ ಬೆಳೆಯುತ್ತಾ, ಅತ್ಯಂತ ಪ್ರೇಮರೂಪವಾಗಿ

ಬೆಳೆದು, ಪರಮ ಭಕ್ತಿಯಾಗಿ ಮಾರ್ಪಟ್ಟು, ಅನುರಕ್ತಿಯಿಂದೊಡಗೂಡಿ, ವ್ರಜಭೂಮಿಯಲ್ಲಿರುವ ಗೋಪಿಕೆಯರ ಭಾವವನ್ನು ತಳೆದು, ಶ್ರೀಕೃಷ್ಣಪರಮಾತ್ಮನ ಸಾನ್ನಿಧ್ಯ ಸುಖವನ್ನು ಅಪೇಕ್ಷಿಸಿ, ಸಾಧಿಸಿದ ಗೋದಾದೇವಿಯ ಪ್ರಭಾವ ವಲಯದಿಂದಾದ ಮೃದು ಮಧುರ ಪುಳಕ.

ಇಂದಿಗೂ ಎಂದೆಂದಿಗೂ ಏಳೇಳು ತಲೆಮಾರುಗಳ ಜನ್ಮಪರಂಪರೆಗಳಲ್ಲಿಯೂ ನಾವು ನಿನಗೇ ದಾಸರಾಗಿ, ನಿನ್ನ ಕೈಂಕರ್ಯ ಮಾಡುವವರಾಗುವಂತೆ, ನೀನೇ ನಮ್ಮ ಇತರ ಆಸೆ ಆಕಾಂಕ್ಷೆಗಳನ್ನೆಲ್ಲಾ ಮಾರ್ಪಡಿಸಿ, ನಮ್ಮಿಂದ ನಿನ್ನ ಕೈಂಕರ್ಯ ಮಾಡಿಸಿ, ಅದನ್ನು ನೀನು ಸ್ವೀಕರಿಸಿ, ಕೈಂಕರ್ಯ ಪುರುಷಾರ್ಥವನ್ನು ಅನುಗ್ರಹಿಸಬೇಕೆಂದು ಪರಮಾತ್ಮನನ್ನು ಪ್ರಾರ್ಥಿಸಿ, ಅವನಲ್ಲಿ ಗೋದಾದೇವಿ ಮಾಡಿದ ವಿಶಿಷ್ಟ ಶರಣಾಗತಿಯ ಸಂವೇದನೆ. ದೂರದಿಂದಲೇ ಕೈಬೀಸಿ ಕರೆಯುತ್ತಿರುವ ಸುಂದರ ಗಂಭೀರ ರಾಜಗೋಪುರ. ತಮಿಳುನಾಡಿನ ರಾಜ್ಯಲಾಂಛನ.




ದಾರಿಯಲ್ಲಿ ಎಲ್ಲೆಲ್ಲೂ ಕಂಗೊಳಿಸುತ್ತಿರುವ ರಮಣೀಯ ಹೂಮಾಲೆಗಳು.



ಗೋದಾದೇವಿಯಿಂದಲೇ ಧರಿಸಲ್ಪಟ್ಟು ನಂತರವೇ ಭಗವಂತನ ಕೈಂಕರ್ಯಕ್ಕಾಗಿ ಹೋಗುತ್ತಿವೆಯೇನೋ ಅನ್ನುವಂತಹ ಭಾವ ಪರವಶತೆ. ಕದಂಬಮಾಲೆಗಳು, ತುಲಸೀ ಮಾಲೆಗಳನ್ನು ನೋಡುತ್ತಾ ಮುಂದುವರೆದಂತೆ, ಶ್ರೀಕೃಷ್ಣದೇವರಾಯರ ಕಾವ್ಯಾತ್ಮಕ ನಿರೂಪಣೆ ಆಮುಕ್ತಮಾಲ್ಯದ ನಾಮಸೂಚ ನಾಯಕಿಯಾದ ಗೋದೆಯ ಭಕ್ತಿ ಮತ್ತು ದೈವಿಕ ಪವಾಡಗಳ ಮಾನಸಿಕ ದರ್ಶನದ ಭಿತ್ತಿಚಿತ್ರ. ದೇವಾಲಯದ ಪ್ರಾಂಗಣ. ಗೋದಾದೇವಿಯ ಶ್ರೀಕೃಷ್ಣಪರಮಾತ್ಮನ ಅರಮನೆ. ವಿಷ್ಣುಚಿತ್ತರ ಇಷ್ಟದೈವದ

ಸನ್ನಿಧಾನ. ದಕ್ಷಿಣದಲ್ಲಿ ಗೋದಾದೇವಿ, ಬಲಬದಿಯಲ್ಲಿ ವಟಪತ್ರಶಾಯಿಯ ಸನ್ನಿಧಿ. ವಟಪತ್ರಶಾಯಿಯ ಭವ್ಯರೂಪವನ್ನೊಳಗೊಂಡ ವಿಗ್ರಹದಿಂದ ಕೂಡಿದ ಮುಖ್ಯದ್ವಾರ.






**ಕರ್ಕಟೇ ಪೂರ್ವ ಫಲ್ಗುಣ್ಯಾ**
**ತುಲಸೀ ಕಾನನೋದ್ಭವಾಂ**
**ಪಾಂಡ್ಯ ವಿಶ್ವಂ ಭರಮ್ ಗೋದಾಂ**
**ವಂದೇ ಶ್ರೀರಂಗನಾಯಕೀಮ್ ॥**

ಗೋದೆಯ ಉದ್ಭವ ಕ್ಷೇತ್ರ. ಭಗವದ್ಭಕ್ತಿಯ ಹಿರಿಮೆಯನ್ನು ತಮ್ಮ ದಿವ್ಯ ಪ್ರಬಂಧಗಳ ಮೂಲಕ ಜನರಿಗೆ ಉಪದೇಶಮಾಡಿ ಪ್ರಚಾರ ಪಡಿಸಿ ಭಗವಾನ್ ನಾರಾಯಣನ ಪ್ರಭುತ್ವವನ್ನು ರಾಜನ ಆಸ್ಥಾನದಲ್ಲಿ ಸ್ಥಾಪಿಸಿದ ವಿಷ್ಣುಚಿತ್ತನಿಗೆ ಭಗವಾನನಿತ್ತ ದಿವ್ಯ ಕೊಡುಗೆ, ಸಾಕ್ಷಾತ್ ಭೂದೇವಿ. ವಿಶಾಲವಾದ ಸುಂದರ ತೋಟ. ಪ್ರಶಾಂತ ಪವಿತ್ರ ವಾತಾವರಣ. ವಿಷ್ಣುಚಿತ್ತರಿಗೆ ಗೋದೆಯು ಲಭ್ಯವಾದ ತುಲಸೀವನ.



ಮಂಟಪದಲ್ಲಿ ವಿಷ್ಣುಚಿತ್ತರ ಮತ್ತು ಪುಟ್ಟಗೋದೆಯ ಸುಂದರ ವಿಗ್ರಹ. ತುಲಸೀಕೋಟೆಯ ಮುಂದೆ ಪುಟ್ಟ ಗೋದೆಯ ಮೂರ್ತಿ, ಗೋದಾದೇವಿಯ ಪುಟ್ಟ ದೇವಾಲಯ. ಗೋದೆಯ ಸುಂದರ ವರ್ಣಚಿತ್ರ, ಇದೆಲ್ಲವನ್ನೂ ನೋಡುತ್ತಿದ್ದಂತೆಯೇ, "ಪರಮಾತ್ಮನೇ ಸರ್ವರಿಗೂ ಸ್ವಾಮಿ, ಅವನ ಕೃಪೆಯೇ ನಮ್ಮ


ರಕ್ಷಣೆಯ ಉಪಾಯ, ಅವನಿಗೆ ಕೈಂಕರ್ಯ ಮಾಡುವುದೇ ಪುರುಷಾರ್ಥ ಮತ್ತು ಭಗವತ್ ಕೈಂಕರ್ಯಕ್ಕಾಗಿ ಕರ್ತವ್ಯ ಕರ್ಮಗಳನ್ನು ಸಂತೋಷವಾಗಿ ಮಾಡುತ್ತಾ ಭಗವಂತನ ಕಲ್ಯಾಣ ಗುಣಗಳನ್ನು ಹಾಡಿ, ಭಗವದ್ಗುಣಸಾಗರದಲ್ಲಿ ಮುಳುಗಿ, ಭಗವದನುಭವ ಪಡೆಯುವುದೇ ಸರ್ವರೂ ಆಚರಿಸಬೇಕಾದ ಮಾರ್ಗ" ಎಂಬ ಗೋದೆಯ ತತ್ತ್ವದ ಸ್ಮರಣೀಯ ನೇಪಥ್ಯದಲ್ಲಿ, ಗೋದೆಯ ಪಾದಸ್ಪರ್ಶದಿಂದ ಪುನೀತವಾದ ಪ್ರದೇಶದಲ್ಲಿ ನಾವೂ ಅವಳೊಂದಿಗೆ ಬಾಲ್ಯವನ್ನು ಕಳೆದಂತಹ ಸುಮಧುರ ಚಿಂತನೆ. ಗೋದೆಯ ಪುಟ್ಟ ಪುಟ್ಟ ಕಾಲುಗಳ ಗೆಜ್ಜೆಯ ನಾದ, ಮುಗ್ಧ ಮಂದಹಾಸದ ಕಿರುಧ್ವನಿ, ವಿಷ್ಣುಚಿತ್ತರಿಂದ ಅವಳಿಗೆ ಹೇಳಲ್ಪಡುತ್ತಿರುವ ಶ್ರೀಕೃಷ್ಣಲೀಲೆಗಳ ಕಥೆಗಳು, ಗಾನಾಮೃತಾಸ್ವಾದವನ್ನು ಮಾಡುತ್ತಾ ಮಾಡುತ್ತಾ ಅವಳೊಂದಿಗೆ ಪಯಣ. ಬಾಲಪ್ರತಿಭೆ ಸುಂದರ ಕನ್ಯೆಯಾಗಿ, ಗೋದಾದೇವಿಯ ಪ್ರೀತಿ ಸಹ, ಗೋಪಿಯರಿಗೆ ಶ್ರೀಕೃಷ್ಣನಲ್ಲಿ ಮೂಡಿದ ಪ್ರೀತಿಯಿಂದ ಕೂಡಿದ ಭಕ್ತಿಯಂತೆ ಪರಿವರ್ತನೆ ಹೊಂದಿದ ಸನ್ನಿಧಾನ. ಶ್ರೀವಟಪತ್ರಶಾಯಿಗೆ ಸಮರ್ಪಿಸಲು ನಿತ್ಯವೂ ವಿಷ್ಣುಚಿತ್ತರು ಕಟ್ಟುತ್ತಿದ್ದ ಮಾಲೆಗಳನ್ನು ಮೊದಲು ತಾನು ಪ್ರಯತ್ನಿಸಿ, ನಂತರ ದೇವರಿಗೆ ಅರ್ಪಿಸಲು ತಂದೆಗೆ ಕೊಡುತ್ತಿದ್ದ ಗೋದಾ, ಆ ಮಾಲೆಗಳನ್ನು ಪರಮಾನಂದದಲ್ಲಿ ಸ್ವೀಕರಿಸುತ್ತಿದ್ದ ವಟಪತ್ರಶಾಯಿಯ ದೇಗುಲ, ಭಕ್ತರ ಪಾಲಿಗೆ ಕಲ್ಪವೃಕ್ಷ.







ಅರ್ಚಾವತಾರದಲ್ಲಿ ನೆಲೆಯಾಗಿ ಭಕ್ತರ ಪ್ರಾರ್ಥನೆಗಳನ್ನು ಸ್ವೀಕರಿಸುತ್ತಿರುವ ವಟಪತ್ರಶಾಯಿ. ವಿವಿಧ ಪೌರಾಣಿಕ ಗಾಥೆಗಳ ಶಿಲ್ಪಗಳಿಂದ ಶೋಭಿಸುತ್ತಿರುವ ಸುಂದರ ಗಂಭೀರ ರಾಜಗೋಪುರ. ವಿಷ್ಣುಚಿತ್ತರ ಅತ್ಯಂತ ಪ್ರೀತಿಪಾತ್ರ ಸನ್ನಿಧಾನ. ಅನೇಕ ಪಾಶುರಗಳ ಸ್ಫೂರ್ತಿದಾಯಕ ಕ್ಷೇತ್ರದ

ವಿಶಾಲವಾದ ಪ್ರಾಂಗಣ, ಭವ್ಯ ಧ್ವಜಸ್ತಂಭ ಬಲಿಪೀಠದೊಂದಿಗೆ ಶೋಭಾಯಮಾನ. ರಾಜಸ್ತಂಭದಲ್ಲಿ ತುಲಸೀ ಹಾರಗಳಿಂದ ಶೋಭಿತನಾದ ವಿಷ್ಣುಭಕ್ತ ಹನುಮಂತ. ನಿತ್ಯಾದಿತ್ಯರೆಂದೇ ಪ್ರಸಿದ್ಧರಾದ ಶ್ರೀಮನ್ನಾರಾಯಣನ ಅಂಶವೇ ಆಗಿರುವ, ಉತ್ಕಟ ಭಕ್ತರಾದ, ದಿವ್ಯ ಪ್ರಬಂಧ ಪಾಶುರಗಳನ್ನು ರಚಿಸಿದ ನಮ್ಮಾಳ್ವಾರ್, ಕುಲಶೇಖರಾಳ್ವಾರ್ ಮುಂತಾದವರ ಉಪಾಲಯಗಳುಳ್ಳ ವಿಶಾಲ ಸಂಕೀರ್ಣ. ಎರಡು ಅಂತಸ್ತುಗಳಿಂದ ಕೂಡಿದ ದಿವ್ಯಮಂದಿರದ ಮೊದಲನೆಯ ಪ್ರಾಂಗಣದಲ್ಲಿ ಶಂಖ ಚಕ್ರ ಗದಾಧಾರಿಯಾಗಿ ಅಭಯ ವರದ ಹಸ್ತಗಳೊಂದಿಗಿರುವ ಲಕ್ಷ್ಮೀ ನರಸಿಂಹ. ಸತ್ಯಯುಗದ ನಾಲ್ಕನೆಯ ಮಹಾವಿಷ್ಣುವಿನ ಅವತಾರ. ಮೆಟ್ಟಲೇರಿ ಮೇಲೆ ಹೋದಂತೆ, ಸತ್ಯಯುಗದಲ್ಲಿ ಭೂಮಿಯನ್ನು ಸಾಗರದ ಆಳದಲ್ಲಿ ಕೊಂಡೊಯ್ದ ರಾಕ್ಷಸನ ಜೊತೆ ಸಮರದಲ್ಲಿ ಜಯ ಸಾಧಿಸಿ, ತನ್ನ ದಂತಗಳ ಮಧ್ಯೆ ಭೂಮಿಯನ್ನು ಇರಿಸಿಕೊಂಡು, ಸಾಗರದಾಳದಿಂದ ಹೊರತೆಗೆದು ಬ್ರಹ್ಮಾಂಡದಲ್ಲಿ ಅದರ ಸ್ಥಾನಕ್ಕೆ ಮರುಸ್ಥಾಪಿಸಿದ ವರಾಹ ಪೆರುಮಾಳ್ ಸನ್ನಿಧಿ.





ಭಕ್ತಿಯಲ್ಲಿಯೇ ಮುಳುಗಿ, ಆಳವಾದ ನಿಷ್ಟೆಯಲ್ಲಿ, ತಮ್ಮ ತನುಮನಗಳನ್ನೆಲ್ಲಾ ಭಗವಂತನಿಗೇ ಅರ್ಪಿಸಿದ ಆಳ್ವಾರ್ ಗಳ ಉಪಸ್ಥಿತಿಯಲ್ಲಿ, ದುಷ್ಟ ಶಿಕ್ಷಣೆ ಮಾಡುತ್ತಾ ಶಿಷ್ಟ ರಕ್ಷಣೆ ನೀಡುತ್ತಿರುವ ಶ್ರೀಚಕ್ರತಾಳ್ವಾರ್ ಸನ್ನಿಧಿಯಲ್ಲಿ, ಸದಾ ಪರಂಧಾಮನ ದರ್ಶನ ಮಾಡುತ್ತಿರುವ ಗರುಡಾಳ್ವಾರ್ ಸನ್ನಿಧಿಯಲ್ಲಿ, ಜಯ ವಿಜಯರು ದ್ವಾರಪಾಲಕರಾಗಿ ಶೋಭಿಸುತ್ತಿರುವ ಭೂವೈಕುಂಠ. ದಿವ್ಯಪ್ರಭೆಗಳಿಂದ ತೇಜೋಮಯನಾಗಿ, ಪರಮ ಸಮ್ಮೋಹನಾಕಾರನಾಗಿ, ಆದಿಶೇಷನ ಮೇಲೆ ಶಯನಿಸುತ್ತಿರುವ ಭಂಗಿಯಲ್ಲಿ,

ವಟಪತ್ರಶಾಯಿಯಾಗಿ ನಾಭಿ ಕಮಲದಲ್ಲಿ ಬ್ರಹ್ಮ, ಪಾದದ್ವಯಗಳ ಬಳಿ ಶ್ರೀದೇವಿ ಭೂದೇವಿಯರು, ಭೃಗು, ಮಾರ್ಕಂಡೇಯ ಮಹರ್ಷಿಗಳು, ಸೂರ್ಯ ಚಂದ್ರ, ವಿಶ್ವಕ್ಸೇನ, ನಾರದ, ತುಂಬುರರು, ವಿಲ್ಲಿ ಪುತ್ತರ್ ಕಿರಾತರಾಜ ಸೋದರರೂ ಸೇವಿಸುತ್ತಾ ಇರುವ ಅದ್ಭುತ ದೃಶ್ಯದ ವೀಕ್ಷಣೆ.

**ಕ್ಷೀರೋಧನ್ವತ್ಪ್ರದೇಶೇ ಶುಚಿಮಣಿವಲಸತ್ ಸೈಕತೇ ಮೌಕ್ತಿಕಾನಾಂ**
**ಮಾಲಾಕ್ಲುಪ್ತಾಸನಸ್ಥಃ ಸ್ಫಟಿಕಮಣಿನಿಭೈಃ ಮೌಕ್ತಿಕೈರ್ಮಂಡಿತಾಂಗಃ ।**
**ಶುಭ್ರೈರದಭ್ರೈರುಪರಿವಿರಚಿತೈರ್ಮುಕ್ತಪೀಯೂಷ ವರ್ಷೈಃ**
**ಆನಂದೀ ನಃ ಪುನೀಯಾ ದರಿನಳಿನಗದಾ ಶಂಖಪಾಣಿರ್ಮುಕುಂದಃ ॥**
**ಭೂಃ ಪಾದೌ ಯಸ್ಯನಾಭಿರ್ವಿಯದಸುರನಿಲಶ್ಚಂದ್ರಸೂರ್ಯೌಚ ನೇತ್ರೇ**
**ಕರ್ಣಾವಾಸಾಃ ಶಿರೋ ದೌರ್ಮುಖಮಪಿ ದಹನೋ ಯಸ್ಯ ವಾಸ್ತೇಯಮಬ್ಧಿಃ ।**
**ಅಂತಸ್ಥಂ ಯಸ್ಯ ವಿಶ್ವಂ ಸುರನರಖಗಗೋ ಭೋಗಿಗಂಧರ್ವದೈತ್ಯೈಃ**
**ಚಿತ್ರಂ ರಂ ರಮ್ಯತೇ ತಂ ತ್ರಿಭುವನಮಪುಷಂ ವಿಷ್ಣುಮೀಶಂ ನಮಾಮಿ ॥**

ಗೋದೆಯ ತಿರುಪ್ಪಾವೈ ಕಾವ್ಯದ ನಾಯಕ. ಗೋದೆಯು ಧರಿಸಿದ ಮಾಲೆಗಳನ್ನು ಸ್ವೀಕರಿಸಿದ ಪರಮಾತ್ಮ, ವಿಷ್ಣುಚಿತ್ತರ ಆರಾಧ್ಯ ದೈವ ವಟಪತ್ರಶಾಯಿ.

**ವಿಷ್ಣುಂ ಜಿಷ್ಣುಂ ಮಹಾವಿಷ್ಣುಂ ಪ್ರಭವಿಷ್ಣುಂ ಮಹೇಶ್ವರಮ್ ।**
**ಅನೇಕ ರೂಪ ದೈತ್ಯಾಂತಂ ನಮಾಮಿ ಪುರುಷೋತ್ತಮಮ್ ॥**

ಗೋದೆಯಿಂದ ಶ್ರೀಕೃಷ್ಣನ ಅರಮನೆಯೆಂದೇ ಭಾವಿಸಲ್ಪಟ್ಟ ದಿವ್ಯ ಸನ್ನಿಧಾನ. ಭಗವಂತನನ್ನು ಆಶ್ರಯಿಸಿ ಮೂವತ್ತು ದಿವಸ ಭಗವನ್ನಾಮ ಸಂಕೀರ್ತನೆ ಮಾಡುತ್ತಾ ಭಗದ್ಗುಣಾನುಭವ ರೂಪವಾದ ವ್ರತವನ್ನು ಆಚರಿಸಿ, ಭಗವಂತನಲ್ಲಿ ಶರಣಾಗತಿ ಮಾಡಿದ ಗೋದೆಯ, ಶ್ರೀಕೃಷ್ಣನ ರೂಪ. ಗೋಪಿಯರಿಗೆ ಶ್ರೀಕೃಷ್ಣನಲ್ಲಿ ಉಂಟಾದ ಪ್ರೀತಿಯಿಂದ ಕೂಡಿದ ಭಕ್ತಿಯಂತೆ, ಶ್ರೀಕೃಷ್ಣನ ವಿರಹವನ್ನು ತಾಳಲಾರದ ಗೋಪಕನ್ಯೆಯರಂತೆ ಗೋದಾದೇವಿಗೂ ಪರಮಾತ್ಮನ ಹಂಬಲವು ಹೆಚ್ಚಾಗಿ, ಭಕ್ತಿಯು ಪರಮ ಭಕ್ತಿಯ ಪ್ರೇಮ ರೂಪವನ್ನು ತಾಳಿ, ಪರಮಾತ್ಮನ ದರ್ಶನವನ್ನು ಕೋರಿ, ಪರವಶಳಾಗಿ ಧ್ಯಾನ ಮಾಡುತ್ತಾ, ದ್ವಾಪರಯುಗದಲ್ಲಿ ಗೋಪಿಗಳು ನಂದಗೋಕುಲದಲ್ಲಿ ಶ್ರೀಕೃಷ್ಣನ ಅನುಗ್ರಹಕ್ಕಾಗಿ ಆಚರಿಸಿದ ಕಾತ್ಯಾಯನೀ ವ್ರತದ ಕ್ರಮವನ್ನು ಅನುಸರಿಸಿ, ಕಲಿಯುಗದಲ್ಲಿ ಶ್ರೀವಿಲ್ಲಿಪುತ್ತೂರ್ ನಲ್ಲಿ ಮಾರ್ಗಳಿ ನೀರಾಟ್ಟ ವ್ರತ ಮಾಡಿದ ಪ್ರದೇಶ. ವ್ರತಾನುಚರಣೆ ಮಾಡುತ್ತಾ ತಾನೇ ಗೋಪಿ ಎಂದು ಭಾವಿಸಿಕೊಂಡು ಪಾಶುರಗಳನ್ನು ಶ್ರೀಕೃಷ್ಣನಿಗಾಗಿ ಹಾಡಿ, ಮಾಡಿದ ಶರಣಾಗತಿ.



" ಓ ! ಶ್ರೀಕೃಷ್ಣ ! ನೀನು ನನ್ನ ತಾಯಿ, ತಂದೆ, ಸ್ನೇಹಿತ ಮತ್ತು ಸಂಬಂಧಿಕ. ನೀನೇ ನನಗೆ ಸರ್ವಸ್ವ. ನನ್ನ ಎಲ್ಲಾ ಬಂಧಗಳು ನಿನ್ನೊಂದಿಗೆ ಮಾತ್ರ. ಈ ಜನ್ಮದಲ್ಲಷ್ಟೇ ಅಲ್ಲ. ಎಲ್ಲಾ ಜನ್ಮದಲ್ಲೂ ಜೀವನದಲ್ಲಿ ನಿಮ್ಮ ಒಡನಾಟ ಮಾತ್ರ ಇರಬೇಕೆಂದು ನಾನು ಬಯಸುತ್ತೇನೆ. ನಿನ್ನ ನಾಮವನ್ನು ಹಾಡುತ್ತಾ,

ನಿನ್ನ ವಿಷಯಗಳನ್ನು ಹೇಳುತ್ತಾ, ನಿನ್ನ ಸುಂದರ ರೂಪವನ್ನು ನೋಡುತ್ತಾ, ನೀನು ನನ್ನ ದೇಹ, ಮಾತು, ಮನಸ್ಸನ್ನು ಸಂಪೂರ್ಣವಾಗಿ ಆವರಿಸಬೇಕೆಂದು ನಾನು ಬಯಸುತ್ತೇನೆ. ನಾನು ನಿನ್ನಲ್ಲಿ ವಿಲೀನಗೊಳ್ಳ ಬಯಸುತ್ತೇನೆ. ಇದಕ್ಕಿಂತ ಮಿಗಿಲಾದ ಆಸೆ ನನಗಿಲ್ಲ." ಪ್ರೀತಿ ಮತ್ತು ಭಕ್ತಿಯ ಮೂರ್ತರೂಪವಾದ ಗೋದಾದೇವಿಯ ಪ್ರಾರ್ಥನೆ. ಅವನನ್ನೇ ಮದುವೆಯಾಗಿ ಅವನನ್ನು ಸೇರಲು ಹಂಬಲಿಸಿದ ಗೋದಾ.



ಗೋದೆಯ ತೀವ್ರ ಪ್ರೀತಿಯಿಂದ ಗೊಂದಲಗೊಂಡ ವಿಷ್ಣುಚಿತ್ತರಿಗೆ ಶ್ರೀಮಹಾವಿಷ್ಣುವು ಗೋದೆಯನ್ನು ಮದುವೆಯಾಗಲು ನೀಡಿದ ಸ್ವಪ್ನದ ಭರವಸೆ. ಶ್ರೀಮಹಾವಿಷ್ಣುವು ಗೋದಾದೇವಿಗೆ 108 ದಿವ್ಯ ದೇಶಗಳಲ್ಲಿರುವ ತನ್ನ ವಿವಿಧ ರೂಪಗಳಲ್ಲಿ ತನಗೆ ಅತ್ಯಂತ ಪ್ರಿಯವಾದ ರೂಪವನ್ನು ಆಯ್ಕೆಮಾಡಲು ಮತ್ತು ಆ ರೂಪದಲ್ಲೇ ಬಂದು ಮದುವೆಯಾಗುವುದಾಗಿ ಕೊಟ್ಟ ಆಶ್ವಾಸನೆ. ದಿವ್ಯ ದೇಶಗಳ ವಿವಿಧ ರೂಪಗಳ ವರ್ಣನೆಯನ್ನು ವಿಷ್ಣುಚಿತ್ತರಿಂದ ಕೇಳುತ್ತಿರುವ ಗೋದಾದೇವಿಗೆ ಶ್ರೀಮಹಾವಿಷ್ಣುವು ಆ ರೂಪದಲ್ಲಿ ಕಾಣಿಸಿಕೊಂಡು, ಅವಳ ಇಚ್ಛೆಗಾಗಿ ಕಾದು ನಿಂತ ದಿವ್ಯ ತಾಣ. ನಾವೂ ಸಹ ಗೋದೆಯೊಂದಿಗೆ, ವಿಷ್ಣುಚಿತ್ತರೊಂದಿಗೆ ಅವರಿಗೆ ಭಾಸವಾಗುತ್ತಿರುವ ದಿವ್ಯರೂಪಗಳಿಗೆ ಸಂಭ್ರಮದಿಂದ ನಮಿಸುವ ಶುಭಗಳಿಗೆ.

1. **ಓಂ ಶ್ರೀರಂಗಕ್ಷೇತ್ರ ನಿವಾಸಾಯ ಶ್ರೀರಂಗನಾಯಕೀ ಸಮೇತಾಯ ಶ್ರೀರಂಗನಾಥಾಯ ನಮಃ।**
2. **ಓಂ ನಿಚುಳಾಪುರವಾಸಾಯ ವಾಸಲಕ್ಷ್ಮೀ ಸಮೇತಾಯ ಸುಂದರ ಜಾಮಾತ್ರೇ ನಮಃ।**
3. **ಓಂ ಪುಳ್ಳಂಪೂದ ನಿವಾಸಾಯ ಹೇಮಾಂಬುಜವಲ್ಲೀ ಸಮೇತಾಯ ಧೃಢಚಾಪಧರಾಯ ಶ್ರೀರಾಮಾಯ ನಮಃ।**
4. **ಓಂ ಅನ್ಬಿಲ್ ಪುರ ನಿವಾಸಾಯ ಸೌಂದರ್ಯವಲ್ಲೀ ಸಮೇತಾಯ ಉಜ್ಜ್ವಲಪೂರ್ಣ ಶ್ರೀಮೂರ್ತಯೇ ನಮಃ।**
5. **ಓಂ ಕರಂಬನಗರ ನಿವಾಸಾಯ ಪೂರ್ಣವಲ್ಲೀ ಸಮೇತಾಯ ಪುರುಷೋತ್ತಮಾಯ ನಮಃ।**
6. **ಓಂ ಸಿತಾದ್ರಿ ನಿವಾಸಾಯ ಚಂಪಕವಲ್ಲೀ ಸಮೇತಾಯ ಪುಂಡರೀಕಾಕ್ಷಾಯ ನಮಃ।**
7. **ಓಂ ತಂಜಮಾ ಮಣಿಪುರ ನಿವಾಸಾಯ ರಮ್ಯಾಬ್ಜವಲ್ಲೀ ಪ್ರಿಯಾಯ ನೀಲಮೇಘಾಯ ನಮಃ।**
8. **ಓಂ ತರುಪ್ಪೆರ್ ಪುರ ವಾಸಾಯ ಕಮಲವಲ್ಲೀ ಸಮೇತಾಯ ಅಪೂಪಪ್ರಿಯ ರಂಗನಾಥಾಯ ನಮಃ।**
9. **ಓಂ ಅಳುಂದೂರ್ ನಿವಾಸಾಯ ಶೆಂಕಮಲವಲ್ಲೀ ಸಮೇತಾಯ ಆಮರುದಿ ಪ್ರಭವೇ ನಮಃ।**
10. **ಓಂ ಆದನೂರ್ ನಿವಾಸಾಯ ಶ್ರೀರಂಗನಾಯಕೀ ಸಮೇತಾಯ ಆಂಡು ಅಳಕ್ಕುಂ ಮೆಯ್ಯ ನಾಖ್ಯಾಯ ನಮಃ।**
11. **ಓಂ ಬಾಲವ್ಯಾಘ್ರಪುರ ವಾಸಾಯ ಶ್ರೀದೇವೀ ಸಮೇತಾಯ ಕೃಪಾಸಮುದ್ರಾಯ ನಮಃ।**
12. **ಓಂ ಸಾರಕ್ಷೇತ್ರ ನಿವಾಸಾಯ ಸಾರನಾಯಕೀ ಸಮೇತಾಯ ಸಾರನಾಥಾಯ ನಮಃ।**

13. ಓಂ ಶಿರಶ್ಶಂಖಪುರ ವಾಸಾಯ ಶಂಕಮಲವಲ್ಲೀ ಸಮೇತಾಯ ವ್ಯೋಮಜ್ಯೋತಿ ಸ್ವಾಮಿನೇ ನಮಃ ।

14. ಓಂ ಕುಂಭಕೋಣ ಪುರ ವಾಸಾಯ ಕೋಮಲವಲ್ಲೀ ಸಮೇತಾಯ ಅತೃಪ್ತಾಮೃತರೂಪಾಯ ನಮಃ ।

15. ಓಂ ಕಂಡ್ಯೂರ ಪುರವಾಸಾಯ ಕಮಲವಲ್ಲೀ ಸಮೇತಾಯ ಹರಶಾಪಹರಾಯ  ನಮಃ।

16. ಓಂ ತಿರುವಣ್ಣಗರ್ ವಾಸಾಯ ಭೂದೇವಿ ಸಮೇತಾಯ ಅನುಪಮ ಶ್ರೀನಿವಾಸಾಯ ನಮಃ ।

17. ಓಂ ಆಲಿಂಗನ ಪುರೇಶಾಯ ಅಮೃತಘಟವಲ್ಲೀ ಸಮೇತಾಯ ವಯಲಾಲಿ ಮಣವಾಳನ್ ಸ್ವಾಮಿನೇ ನಮಃ ।

18. ಓಂ ಕಣ್ಣಪುರೇಶಾಯ ಕಣ್ಣಪುರನಾಯಕೀ ಶ್ರೀ ಭೂ ನೀಳಾ ಗೋದಾ ಸಮೇತಾಯ ಶೌರಿರಾಜಾಯ ನಮಃ ।

19. ಓಂ ನಾಗಪುರ ನಿವಾಸಾಯ ಸೌಂದರ್ಯವಲ್ಲೀ ಸಮೇತಾಯ ಸೌಂದರ್ಯರಾಜಾಯ ನಮಃ ।

20. ಓಂ ಕಾಗ್ರಿ ಶ್ರೀರಾಮವಿಣ್ಣಗಳ ವಾಸಾಯ ಲೋಕನಾಯಕೀ ಸಮೇತಾಯ ತ್ರಿವಿಕ್ರಮ ನಾರಾಯಣಾಯ ನಮಃ ।

21. ಓಂ ನಂದಿಪುರ ವಿಣ್ಣಗರ್ ವಾಸಾಯ ಚಂಪಕವಲ್ಲೀ ಸಮೇತಾಯ ನಾಥನಾಥಾಯ ನಮಃ ।

22. ಓಂ ಇಂದಳೂರ್ ಪುರ ವಾಸಾಯ ಸುಗಂಧವನನಾಯಕೀ ಸಮೇತಾಯ ಪರಿಮಳ ರಂಗನಾಥಾಯ ನಮಃ ।

23. ಓಂ ಚಿತ್ರಕೂಟ ನಿವಾಸಾಯ ಪುಂಡರೀಕವಲ್ಲೀ ಸಮೇತಾಯ ಗೋವಿಂದರಾಜಾಯ ನಮಃ ।

24. ಓಂ ಶುಲ್ಕಪುರ ವಾಸಾಯ ಮಂಜುಲವಲ್ಲೀ ಸಮೇತಾಯ ಸುಂದರ ಪರಿಪೂರ್ಣಾಯ ಶ್ರೀನಿವಾಸಾಯ ನಮಃ ।

25. ಓಂ ಕೂಡಲೂರ್ ನಿವಾಸಾಯ ಪದ್ಮಾಸನವಲ್ಲೀ ಸಮೇತಾಯ ಜಗದ್ರಕ್ಷಕಾಯ ನಮಃ ।

26. ಓಂ ತಿರುಕ್ಕಣಂ ಗುಡಿ ವಾಸಾಯ ಅರವಿಂದನಾಯಕೀ ಸಮೇತಾಯ ಶ್ಯಾಮಲತನವೇ ನಮಃ ।

27. ಓಂ ಕಣ್ಣಮಂಗೈ ಪುರೇಶಾಯ ಅಭಿಷೇಕವಲ್ಲಿ ಸಮೇತಾಯ ಭಕ್ತವತ್ಸಲಾಯ ನಮಃ ।

28. ಓಂ ಕಪಿಸ್ಥಲ ನಿವಾಸಾಯ ರಮಾಮಣಿ ವಲ್ಲೀ ಸಮೇತಾಯ ಗಜೇಂದ್ರವರದಾಯ ನಮಃ ।

29. ಓಂ ತಿರುವೆಳ್ಳಿಯಂಗುಡಿ ನಿವಾಸಾಯ ಮರಕತವಲ್ಲೀ ಸಮೇತಾಯ ಕೋಲವಲ್ ವಿಲ್ಲ ರಘುನಾಥಾಯ ನಮಃ ।

30. ಓಂ ದಿವ್ಯಮಣಿ ಮಾಡಪುರ ವಾಸಾಯ ಪುಂಡರೀಕವಲ್ಲೀ ಸಮೇತಾಯ ನಂದಾಪ್ರದೀಪ ಭಗವತೇ ನಮಃ ।

31. ಓಂ ವೈಕುಂಠ ವಿಣ್ಣಗರ ವಾಸಿನೇ ವೈಕುಂಠವಲ್ಲೀ ಸಮೇತಾಯ ಶ್ರೀ ವೈಕುಂಠನಾಥಾಯ ನಮಃ ।

32. ಓಂ ಅರಿಮೇಯ ವಿಣ್ಣಗರ ವಾಸಾಯ ಅಮೃತಘಟವಲ್ಲೀ ಸಮೇತಾಯ ಘಟನರ್ತಕಾಯ ನಮಃ ।

33. ಓಂ ದೇವಬೃಂದಪುರ ವಾಸಾಯ ಕ್ಷೀರಾಬ್ಧಿನಾಯಿಕಾ ಸಮೇತಾಯ ದೇವನಾಯಕಾಯ ನಮಃ ।

34. ಓಂ ಪುರುಷೋತ್ತಮಪುರ ವಾಸಾಯ ಪುರುಷೋತ್ತಮ ನಾಯಿಕಾ ಸಮೇತಾಯ ಪುರುಷೋತ್ತಮಾಯ ನಮಃ ।

35. ಓಂ ಹೇಮರಂಗಪುರ ವಾಸಾಯ ಶ್ವೇತ ಪುಷ್ಪವಲ್ಲೀ ಸಮೇತಾಯ ಹೇಮರಂಗಾಯ ನಮಃ ।

36. ಓಂ ಮಣಿಕೂಟಪುರ ವಾಸಾಯ ಮಹಾಲಕ್ಷ್ಮೀ ಸಮೇತಾಯ ಮಣಿಕೂಟಪ್ರಭವೇ  ನಮಃ ।

37. ಓಂ ತೆಟ್ರಯಂಬಲ ಪುರೇಶಾಯ ಶೆಂಕಮಲವಲ್ಲೀ ಸಮೇತಾಯ ಶ್ರೀರಂಗನಾಥಾಯ ನಮಃ ।

38. ಓಂ ಕಾವಳಂಪಾಡಿ ವಾಸಾಯ ರುಕ್ಮಿಣೀ ಸತ್ಯಭಾಮಾ ಸಮೇತಾಯ ಗೋಪಾಲಕೃಷ್ಣಾಯ ನಮಃ ।

39. ಓಂ ಶ್ವೇತಪುಷ್ಕರಿಣೀಶಾಯ ಪದ್ಮಾವತೀ ಸಮೇತಾಯ ಶ್ರೀನಿವಾಸಾಯ ನಮಃ ।

40. ಓಂ ಪಾರ್ಥ ಶಯನಪುರ ವಾಸಾಯ ತಾಮರನಾಯಕೀ ಸಮೇತಾಯ ಕಮಲನಾಥಾಯ ನಮಃ ।

41. ಓಂ ವೃಷಭಾದ್ರಿ ವಾಸಾಯ ಕಲ್ಯಾಣ ಸುಂದರವಲ್ಲೀ ಸಮೇತಾಯ ಸುಂದರಬಾಹು ಸ್ವಾಮಿನೇ ನಮಃ ।

42. ಓಂ ಗೋಷ್ಠೀಪುರ ನಿವಾಸಾಯ ಮಹಾಸ್ವಾಮಿನೀ ಸಮೇತಾಯ ಸೌಮ್ಯನಾರಾಯಣಾಯ ನಮಃ ।

43. ಓಂ ಸತ್ಯವ್ರತ ಕ್ಷೇತ್ರ ವಾಸಾಯ ಉಜ್ಜೀವನವಲ್ಲೀ ಸಮೇತಾಯ ಸತ್ಯಮೂರ್ತಿ ಸ್ವಾಮಿನೇ ನಮಃ ।

44. ಓಂ ದರ್ಭಶಯನ ನಿವಾಸಾಯ ಪದ್ಮಾನನ ಕಲ್ಯಾಣವಲ್ಲೀ ಸಮೇತಾಯ ಆದಿ ಜಗನ್ನಾಥಾಯ ನಮಃ ।

45. ಓಂ ಶ್ರೀಪುರ ನಿವಾಸಾಯ ಅರುಣಕಮಲವಲ್ಲೀ ಸಮೇತಾಯ ಸ್ಥಿತನಾರಾಯಣಾಯ ನಮಃ ।

46. ಓಂ ತಿರುವಾಟ್ಟಾರ್ ಕ್ಷೇತ್ರ ವಾಸಾಯ ಮರಕತವಲ್ಲೀ ಸಮೇತಾಯ ಆದಿಕೇಶವಾಯ ನಮಃ ।

47. ಓಂ ಶ್ರೀಧನ್ವಿಪುರ ವಾಸಾಯ ಶ್ರೀ ಭೂ ಸಮೇತಾಯ ವಟಧಾಮ್ನೇ ನಮಃ ।

48. ಓಂ ದಕ್ಷಿಣ ಮಧುರಾಪುರ ವಾಸಾಯ ಮಧುರವಲ್ಲೀ ಸಮೇತಾಯ ವ್ಯೂಹ ಸುಂದರರಾಜಾಯ ನಮಃ ।

49. ಓಂ ಕುರುಕಾಪುರ ವಾಸಾಯ ಆದಿನಾಥನಾಯಕೀ ಸಮೇತಾಯ ಆದಿನಾಥಾಯ ನಮಃ ।

50. ಓಂ ತೊಲೈವಿಲ್ಲಿ ಮಂಗಳಪುರ ನಿವಾಸಾಯ ಅಸಿತೇಕ್ಷಣಾ ಸಮೇತಾಯ ಸುರೇಶಾಸನಾಯ ನಮಃ ।

51. ಓಂ ತೋತಾದ್ರಿ ಕ್ಷೇತ್ರ ವಾಸಾಯ ವರಮಂಗನಾಯಕೀ ಸಮೇತಾಯ ದೈವನಾಯಕ ಸ್ವಾಮಿನೇ ನಮಃ ।

52. ಓಂ ಪುಳಿಂಗುಡಿ ನಿವಾಸಾಯ ಪದ್ಮವಾಸಿನೀ ಸಮೇತಾಯ ಕಾಯ್ ಶಿನ ಭೂಪತಯೇ ನಮಃ ।

53. ಓಂ ತೆನ್ ತಿರುಪ್ಪೇರ್ ಪುರ ವಾಸಾಯ ಕುಗ್ರೈಕಾದವಲ್ಲೀ ಸಮೇತಾಯ ಮಕರಕುಂಡಲಧರಾಯ ನಮಃ ।

54. ಓಂ ಶ್ರೀವೈಕುಂಠಪುರ ವಾಸಾಯ ಶ್ರೀವೈಕುಂಠವಲ್ಲೀ ಸಮೇತಾಯ ಶ್ರೀವೈಕುಂಠನಾಥಾಯ ನಮಃ ।

55. ಓಂ ವರಗುಣ ಮಂಗೈ ಕ್ಷೇತ್ರ ವಾಸಿನೇ ವರಗುಣ ಮಂಗೈ ನಾಯಕೀ ಸಮೇತಾಯ ವಿಜಯಾಸನಾಯ ನಮಃ ।

56. ಓಂ ಶ್ರೀಮತ್ ಕುಳಂದನಗರ ವಾಸಾಯ ಕುಳಂದವಲ್ಲೀ ಸಮೇತಾಯ ಆಶ್ಚರ್ಯನಟಾಯ ನಮಃ ।

57. ಓಂ ವಾಮನಪುರ ವಾಸಾಯ ಕುರುಂಗುಡಿವಲ್ಲೀ ಸಮೇತಾಯ ಪಂಚರೂಪಾಯ ಸುಂದರ ಪರಿಪೂರ್ಣಾಯ ನಮಃ ।

58. ಓಂ ಶ್ರೀಕೊಳೂರ್ ನಗರ ವಾಸಾಯ ಪಲ್ಲವನಾಯಕೀ ಸಮೇತಾಯ ನಿಕ್ಷೇಪವಿತ್ತಾಯ ನಮಃ ।

59. ಓಂ ಕಾಂಚೀಪುರ ವಾಸಾಯ ಪೆರುಂದೇವೀ ಸಮೇತಾಯ ವರದರಾಜಾಯ ನಮಃ।

60. ಓಂ ವಾಜಿಸಾರಪುರ ವಾಸಾಯ ಕಮಲವಲ್ಲೀ ಸಮೇತಾಯ ಶ್ರೀವಾಸವಕ್ಷಾಯ ನಮಃ ।

61. ಓಂ ತಿರುಕಾಟ್ಕರ ವಾಸಾಯ ವಾತ್ಸಲ್ಯವಲ್ಲೀ ಸಮೇತಾಯ ಕಾಟ್ಕರೈ ಅಪ್ಪನ್ ಸ್ವಾಮಿನೇ ನಮಃ ।

62. ಓಂ ಶ್ರೀಸೂಕ್ತಿಪುರ ವಾಸಾಯ ಮಧುರವೇಣೀ ಸಮೇತಾಯ ಶ್ರೀಸೂಕ್ತಿನಾಥಾಯ ನಮಃ ।

63. ಓಂ ತಿರುಪ್ಪುಲಿಯೂರ್ ವಾಸಾಯ ಕನಕಲತಾ ಸಮೇತಾಯ ಆಶ್ಚರ್ಯೋಪಕಾರಾಯ ನಮಃ ।

64. ಓಂ ಶೆಂಗನೂರ್ ನಿವಾಸಾಯ ಶೆಂಕಮಲವಲ್ಲೀ ಸಮೇತಾಯ  ದೇವದೇವಾಯ  ನಮಃ ।

65. ಓಂ ನಾವಾಯ್ ಪುರ ವಾಸಾಯ ಮಲರ್ ಮಂಗೈ ನಾಯಿಕಾ ಸಮೇತಾಯ ಸುಂದರದೇವಾಯ ನಮಃ ।

66. ಓಂ ಶ್ರೀವಲ್ಲಭ ಕ್ಷೇತ್ರ ವಾಸಾಯ ವಾತ್ಸಲ್ಯ ನಾಯಕೀ ಸಮೇತಾಯ ಸುಂದರ ಉಪಕಾರಕಾಯ ನಮಃ ।

67. ಓಂ ತಿರುವಣ್ ವಂಡೂರ್ ವಾಸಾಯ ಕಮಲವಲ್ಲೀ ಸಮೇತಾಯ ಪಾಂಬಣೇ ಸ್ವಾಮಿನೇ ನಮಃ ।

68. ಓಂ ಮೋಹನ ಕ್ಷೇತ್ರ ವಾಸಾಯ ಮೋಹನವಲ್ಲೀ ಸಮೇತಾಯ ಕಾಲಮೇಘಾಯ ನಮಃ।

69. ಓಂ ವಿದ್ವತ್ ಗೋಷ್ಠೀಪುರ ವಾಸಾಯ ವಿತ್ತುವಕ್ಕೊಡುವಲ್ಲೀ ಸಮೇತಾಯ ಅಭಯಪ್ರದಾಯ ನಮಃ ।

70. ಓಂ ಕಟಿಸ್ಥಾನಪುರ ವಾಸಾಯ ಕಲ್ಪಕವಲ್ಲೀ ಸಮೇತಾಯ ಅದ್ಭುತನಾರಾಯಣಾಯ ನಮಃ ।

71. ಓಂ ತಿರುವಾರನ್ ವಿಳೈ ವಾಸಾಯ ಪದ್ಮಾಸನವಲ್ಲೀ ಸಮೇತಾಯ ಉಪಕಾರಕ ವಾಮನಾಯ ನಮಃ ।

72. ಓಂ ಅಹೀಂದ್ರಪುರ ವಾಸಾಯ ಹೇಮಾಂಬುಜವಲ್ಲೀ ಸಮೇತಾಯ ದೇವನಾಥಾಯ ನಮಃ ।

73. ಓಂ ಕೋವಳೂರ್ ಪುರ ವಾಸಾಯ ಪುಷ್ಪವಲ್ಲೀ ಸಮೇತಾಯ ದೇಹಳೀಶಾಯ ನಮಃ ।

74. ಓಂ ಶ್ರೀಅನಂತಪುರ ವಾಸಾಯ ಶ್ರೀಹರಿಲಕ್ಷ್ಮೀ ಸಮೇತಾಯ ಅನಂತಪದ್ಮನಾಭಾಯ ನಮಃ ।

75. ಓಂ ಅಷ್ಟಭುಜ ಕ್ಷೇತ್ರ ವಾಸಾಯ ಅಲರ್ ಮೇಲ್ ಮಂಗಾ ಸಮೇತಾಯ ಆದಿಕೇಶವಾಯ ನಮಃ ।

76. ಓಂ ತಿರುತ್ತಣ್ ಕಾ ಪುರ ವಾಸಾಯ ಮರಕತವಲ್ಲೀ ಸಮೇತಾಯ ದೀಪಪ್ರಕಾಶಾಯ ನಮಃ ।

77. ಓಂ ವೇಳುಕ್ಕುಪುರ ವಾಸಾಯ ವೇಳುಕ್ಕ ವಲ್ಲೀ ಸಮೇತಾಯ ಮುಕುಂದ ನಾರಸಿಂಹಾಯ ನಮಃ ।

78. ಓಂ ಪಾಡಗ ಕ್ಷೇತ್ರ ವಾಸಾಯ ರುಕ್ಮಿಣೀ ಸತ್ಯಭಾಮಾ ಸಮೇತಾಯ ಪಾಂಡವದೂತಾಯ ನಮಃ ।

79. ಓಂ ನೀರಕಾಪುರ ವಾಸಾಯ ನಿಲೈ ಮಂಗೈಲತಾ ನಾಥಾಯ ಜಗದೀಶ್ವರಾಯ ನಮಃ।

80. ಓಂ ನಿಲಾತ್ತಿಂಗಳ್ ತುಂಡ ವಾಸಾಯ ಅನುಪಮ ನಾಯಿಕಾ ಸಮೇತಾಯ ಪೂರ್ಣಚಂದ್ರಪ್ರಭಾಯ ನಮಃ ।

81. ಓಂ ಶೇಷಪುರ ವಾಸಾಯ ಅಮೃತವಲ್ಲೀ ಸಮೇತಾಯ ಜಗದ್ವಿಕ್ರಾಂತಾಯ ನಮಃ।

82. ಓಂ ವೆಹಕಾಪುರ ವಾಸಾಯ ಕೋಮಲವಲ್ಲೀ ಸಮೇತಾಯ ಯಥೋಕ್ತಕಾರಿಣೇ ನಮಃ।

83. ಓಂ ಕಾರಕಪುರ ವಾಸಾಯ ಪದ್ಮಾಮಣಿವಲ್ಲೀ ಸಮೇತಾಯ ಕರುಣಾಕರಾಯ ನಮಃ ।

84. ಓಂ ಕಾರ್ವಾನಪುರ ವಾಸಾಯ ಕಮಲವಲ್ಲೀ ಸಮೇತಾಯ ನವನೀತಚೋರಾಯ ನಮಃ ।

85. ಓಂ ಕಳ್ವನೂರ್ ನಿವಾಸಾಯ ಅಂಶಿಲೈವಲ್ಲೀ ನಾಥಾಯ ಆದಿವರಾಹಾಯ ನಮಃ।

86. ಓಂ ಪ್ರವಾಳಪುರ ವಾಸಾಯ ಪ್ರವಾಳವಲ್ಲೀ ಸಮೇತಾಯ ಪ್ರವಾಳವರ್ಣಾಯ ನಮಃ ।

87. ಓಂ ಪರಮೇಶ್ವರ ವಿಣ್ಣಗರ ವಾಸಾಯ ವೈಕುಂಠನಾಯಕೀ ಸಮೇತಾಯ ವೈಕುಂಠನಾಯಕಾಯ ನಮಃ ।

88. ಓಂ ಜಟಾಯುಪುರ ವಾಸಾಯ ಮರಕತವಲ್ಲೀ ಸಮೇತಾಯ ವಿಜಯರಾಘವಾಯ ನಮಃ ।

89. ಓಂ ಶ್ರೀನಿವಾಸ ಕ್ಷೇತ್ರ ವಾಸಾಯ ಮಜ್ಜನನೀ ನಾಥಾಯ ಭಕ್ತವತ್ಸಲಾಯ ನಮಃ ।

90. ಓಂ ತಿರುವಳ್ಳೂರ್ ಪುರ ವಾಸಾಯ ಕನಕವಲ್ಲೀ ಸಮೇತಾಯ ವೀರರಾಘವಾಯ ನಮಃ ।

91. ಓಂ ಶ್ರೀ ತೋಯಗಿರಿವಾಸಾಯ ಅಣಿಮಾಮಲರ್ ಮಂಗೈ ಸಮೇತಾಯ (ಜಲಪ್ರಭಾಯ) ನೀರ್ ವಣ್ಣನ್ ಸ್ವಾಮಿನೇ ನಮಃ ।

92. ಓಂ ಕಲ್ಯಾಣ ವರಾಹ ಕ್ಷೇತ್ರ ವಾಸಿನೇ ಕೋಮಲವಲ್ಲೀ ಸಮೇತಾಯ ನಿತ್ಯ ಕಲ್ಯಾಣ ಸ್ವಾಮಿನೇ ನಮಃ ।

93. ಓಂ ಮಹಾಬಲಿಪುರ ವಾಸಾಯ ನಿಲ್ಮೈಮಂಗಾ ಸಮೇತಾಯ ಸ್ಥಳಶಾಯಿನೇ ನಮಃ ।

94. ಓಂ ಬೃಂದಾರಣ್ಯ ವಾಸಾಯ ರುಕ್ಮಿಣೀ ಸಮೇತಾಯ ಪಾರ್ಥಸಾರಥಯೇ ನಮಃ ।

95. ಓಂ ಘಟಿಕಾಚಲ ವಾಸಾಯ ಅಮೃತಫಲವಲ್ಲೀ ಸಮೇತಾಯ ಯೋಗನರಸಿಂಹಾಯ ನಮಃ ।

96. ಓಂ ವೇಂಕಟಾಚಲ ವಾಸಾಯ ಶ್ರೀಪದ್ಮಾವತೀ ಸಮೇತಾಯ ಶ್ರೀನಿವಾಸಾಯ ನಮಃ।

97. ಓಂ ಅಹೋಬಲ ನಿವಾಸಾಯ ಮಾಲೋಲಾಯ ನಾರಸಿಂಹಾಯ ನಮಃ ।

98. ಓಂ ಅಯೋಧ್ಯಾ ಪುರ ವಾಸಾಯ ಸೀತಾಲಿಂಗಿತ ಮೂರ್ತಯೇ ಚಕ್ರವರ್ತಿ ತನೂಜಾಯ ನಮಃ ।

99. ಓಂ ನೈಮಿಶಾರಣ್ಯ ವಾಸಾಯ ಪುಂಡರೀಕವಲ್ಲೀ ಸಮೇತಾಯ ದೇವರಾಜಾಯ ನಮಃ।

100. ಓಂ ಮುಕ್ತಿಕ್ಷೇತ್ರ ವಾಸಾಯ ಶ್ರೀದೇವೀ ಸಮೇತಾಯ ಶ್ರೀಮುಕ್ತಿನಾಥಾಯ ನಮಃ ।

101. ಓಂ ಬದರೀಕ್ಷೇತ್ರ ವಾಸಾಯ ಅರವಿಂದವಲ್ಲೀ ಸಮೇತಾಯ ಅಷ್ಟಾಕ್ಷರೀ ಮಂತ್ರ ಪ್ರದಾತ್ರೇ ನರನಾರಾಯಣಾಯ ನಮಃ ।

102. ಓಂ ದೇವಪ್ರಯಾಗ ವಾಸಾಯ ಪುಂಡರೀಕವಲ್ಲೀ ಸಮೇತಾಯ ನೀಲಮೇಘಾಯ ನಮಃ ।

103. ಓಂ ಜ್ಯೋತಿರ್ಮಠ ನಿವಾಸಾಯ ಪರಿಮಳವಲ್ಲೀ ನಾಥಾಯ ಪರಮಪುರುಷಾಯ ನಮಃ ।

104. ಓಂ ಮಧುರಾಧಿಪತಯೇ ದೇವಕೀ ನಂದನಾಯ ದುಷ್ಟವಿನಾಶಕಾಯ ಶ್ರೀಕೃಷ್ಣಾಯ ನಮಃ ।

105. ಓಂ ದ್ವಾರಕಾಧೀಶಾಯ ಅಷ್ಟಮಹಿಷೀ ಸಮೇತಾಯ ಕಲ್ಯಾಣ ನಾರಾಯಣಾಯ ನಮಃ ।

106. ಓಂ ಬೃಂದಾರಣ್ಯ ವಾಸಾಯ ಯಮುನಾತೀರ ವಿಹಾರ ರಸಿಕಾಯ ನವಮೋಹನ ಕೃಷ್ಣಾಯ ನಮಃ ।

**107. ಓಂ ಕ್ಷೀರಾಬ್ಧಿ ನಿವಾಸಾಯ ಕ್ಷೀರಾಬ್ಧಿನಾಯಿಕಾ ಸಮೇತಾಯ ವ್ಯೂಹ ವಾಸುದೇವಾಯ ನಮಃ ।**

**108. ಓಂ ಪರಮಪದ ನಿವಾಸಾಯ ಶ್ರೀ ಭೂ ನೀಳಾದಿ ನಿತ್ಯಸೂರಿ ಪರಿಸೇವಿತಾಯ ಶ್ರೀಪರವಾಸುದೇವಾಯ ನಮಃ ।**

**ಆನಂದರೂಪೇ ನಿಜಭೋಧರೂಪೇ ಬ್ರಹ್ಮಸ್ವರೂಪೇ ಶ್ರುತಿಮೂರ್ತಿರೂಪೇ ।**
**ಶಶಾಂಕರೂಪೇ ರಮಣೀಯರೂಪೇ ಶ್ರೀರಂಗರೂಪೇ ರಮತಾಂ ಮನೋ ಮೇ ॥**

108 ದಿವ್ಯರೂಪಗಳಲ್ಲಿ ಪರಮಾತ್ಮನನ್ನು ನೋಡಿದ ಗೋದಾದೇವಿ, ಶ್ರೀರಂಗಂ ನ ಶ್ರೀರಂಗನಾಥಸ್ವಾಮಿಯ ವೈಭವವನ್ನೂ, ಅವನ ಮಹಾತ್ಮೆಯನ್ನೂ ಅರಿತು, ತಾನು ಅವನನ್ನು ವರಿಸುವುದಾಗಿ ತೀರ್ಮಾನಿಸಿ ತಂದೆಯ ಸಂಗಡ ಪರಿಜನರೊಂದಿಗೆ ಶ್ರೀರಂಗಂ ತಲುಪಿ, ಶ್ರೀರಂಗನಾಥಸ್ವಾಮಿಯ ದಿವ್ಯಮಂಗಳ ವಿಗ್ರಹವನ್ನು ಕಂಡು, ಸಂಪ್ರದಾಯ ರೀತ್ಯಾ ಪ್ರದಕ್ಷಿಣೆಯನ್ನು ಮಾಡಿ ನಮಸ್ಕರಿಸಿ ಭಕ್ತಿಪರವಶಳಾಗಿ, ತದೇಕ ಧ್ಯಾನಪರಳಾಗಿ, ಶ್ರೀರಂಗನಾಥನ ಪಾದಾರವಿಂದಗಳನ್ನು ಭದ್ರವಾಗಿ ಹಿಡಿದುಕೊಂಡು, ಆ ಪಾದಗಳಲ್ಲಿಯೇ ಐಕ್ಯವಾಗಿ ಹೋಗಿ ಅದೃಶ್ಯಳಾಗಿ ಸ್ವಾಮಿಯಲ್ಲೇ ಹೊಂದಿದ ವಿಲೀನ.

108 ದಿವ್ಯರೂಪಗಳಲ್ಲಿ ತನ್ನ ದೈವಿಕ ಪಾದಗಳಿಂದ ಪ್ರತಿಯೊಂದು ಧೂಳಿನ ಕಣವನ್ನೂ ಪವಿತ್ರಗೊಳಿಸಿದ ಮಹಿಮಾನ್ವಿತ ದಿವ್ಯ ದೇಗುಲದ ದರ್ಶನದ ನಂತರ, ಸರ್ಪಶಯನನ ಮೇಲೆ ಏರಿ ಶ್ರೀರಂಗನಾಥನ ಶಾಶ್ವತ ಪ್ರಕಾಶದಲ್ಲಿ ಐಕ್ಯವಾದ ಗೋದಾದೇವಿಯ ದೇವಾಲಯದತ್ತ ಪಯಣ. ಗೋದಾದೇವಿಯ ದೇವಾಲಯದ ಭವ್ಯ ಪ್ರಾಂಗಣ. ಪಾಂಡ್ಯ, ಚೋಳ, ವಿಜಯನಗರ ಮುಂತಾದ ರಾಜರಿಂದ ಸೇವಿಸಲ್ಪಟ್ಟು, ಪೋಷಿಸಲ್ಪಟ್ಟ ಭವ್ಯ ಕ್ಷೇತ್ರ. ಇಂದಿಗೂ ಸಹಸ್ರಾರು ಭಕ್ತರಿಂದ ನಿತ್ಯಾರ್ಚನೆಗೊಳ್ಳುತ್ತಿರುವ ಶುಭಮಂಗಳ ಮೂರ್ತಿಗಳ ನಿಲಯ. ಮಹಿಮಾನ್ವಿತ ಧಾಮ. ತಿರುಪ್ಪಾವೈ ಗೋಪುರ ಎಂದೇ ಹೆಸರಾದ ರಾಜಗೋಪುರ. ಗೋಪುರದ ಮೇಲೆ ಗೋದೆಯ ಮುಗ್ಧ ಹೃದಯದಿಂದ ಹೊರಹೊಮ್ಮಿದ ಕವಿತಾಸಾರ, ತಿರುಪ್ಪಾವೈ ಪಾಶುರಗಳ ಹೃದ್ಯಂಗಮ ಚಿತ್ರಣ. ಪುರಾಣ ಗಾಥೆಗಳ ವಿಶೇಷ ಶಿಲ್ಪಗಳಿಂದ, ಸುಂದರವಾದ ವಿಶಾಲವಾದ ಮಂಟಪಗಳಿಂದ ಶೋಭಿಸುತ್ತಿರುವ ದೇಗುಲ. ತಿರುಪ್ಪಾವೈ ಪಾಶುರಗಳನ್ನು ಗಾನ ಮಾಡುತ್ತಾ ದರ್ಶನಕ್ಕಾಗಿ ಹೋಗುತ್ತಿರುವ ಭಕ್ತರು. ವಿಶಾಲವಾದ ಪ್ರಧಾನ ಆಲಯದ ಪ್ರಾಂಗಣದ ಮಧ್ಯದಲ್ಲಿ ಪಂಚಲೋಹ ಸಮನ್ವಿತ ಧ್ವಜಸ್ತಂಭದ ದರ್ಶನ, ಬಲಿಪೀಠದೊಂದಿಗೆ. ಮುಮುಕ್ಷುವಾದ ಚೇತನನಿಗೆ ನಿತ್ಯಾನುಸಂಧೇಯಗಳಾದ ಅಂಶಗಳನ್ನೂ, ಕರ್ತವ್ಯಾಂಶಗಳ

ಬೋಧನೆಯೊಂದಿಗೆ ಪರಮ ಪುರುಷಾರ್ಥವಾದ ಭಗವತ್ ಕೈಂಕರ್ಯ ಸ್ವರೂಪವನ್ನು ತಿಳಿಸತಕ್ಕ ತಿರುಪ್ಪಾವೈ ಪಾಶುರಗಳ ಸುಂದರ ತೈಲವರ್ಣ ಚಿತ್ರಗಳು. ಗರ್ಭಾಲಯದ ಮುಂದಿನ ಪ್ರಾಕಾರದಲ್ಲಿ ಆದಿಪರಾಶಕ್ತಿ, ಸರಸ್ವತಿ, ವೀರಭದ್ರ, ಶ್ರೀರಾಮ, ಲಕ್ಷ್ಮಣ, ವೇಣುಗೋಪಾಲಸ್ವಾಮಿ, ರಂಭೆ, ಊರ್ವಶೀ, ಮೋಹಿನೀ ಅವತಾರದ ರಮಣೀಯ ಶಿಲ್ಪ ಸಂಪದೆ. ದೇವಾಲಯದ ಸಂಕೀರ್ಣದಲ್ಲಿ ಅಭೀಷ್ಟವರಪ್ರದಾಯಕ ಶ್ರೀಆಂಜನೇಯ ಮತ್ತು ಸರ್ವಶುಭದಾಯಕಳಾದ ಗಜಲಕ್ಷ್ಮೀ ಮಂದಿರಗಳು. ರಂಗು ರಂಗಿನ ದರ್ಪಣ ಮಂಟಪದಲ್ಲಿ ರಾರಾಜಿಸುತ್ತಿರುವ ರಂಗನಾಥ, ಗೋದಾದೇವಿಯ ವಿಶ್ವರೂಪ ದರ್ಶನ. ಗರ್ಭಾಲಯವನ್ನು ಎಚ್ಚರದಿಂದ ಕಾಯುತ್ತಿರುವ ಜಯ ವಿಜಯರು. ಗರ್ಭಗುಡಿಯ ದೀಪದ ಮಂದ ಕಾಂತಿಯಲ್ಲಿ ಶ್ರೀರಂಗಮನ್ನಾರ್, ಆಂಡಾಳ್, ಶ್ರೀರಂಗನಾಥಸ್ವಾಮಿ ಗೋದಾದೇವಿಯರ ದಿವ್ಯಮೂರ್ತಿಗಳ ದರ್ಶನ. ದಕ್ಷಿಣ ಭಾಗದಲ್ಲಿ ಗೋದಾದೇವಿ, ಉತ್ತರ ಭಾಗದಲ್ಲಿ ಗರುತ್ಮಂತನೊಂದಿಗಿರುವ ರಂಗಮನ್ನಾರ್. ಹೆಣ್ಣುಕೊಟ್ಟ ಮಾವನಿಗೆ ಸಾಕ್ಷಾತ್ ಭಗವಂತನೇ ಪ್ರತ್ಯಕ್ಷವಾಗಿರುವ ದಿವ್ಯ ಮೂರ್ತಿಗಳು. ವಿಷ್ಣುಚಿತ್ತರು ನಡೆಸಿಕೊಟ್ಟ ಗೋದೆಯ ಮದುವೆಯ ಮಂಗಳ ಮೂರ್ತಿಗಳನ್ನು ನೋಡುವ ಸೌಭಾಗ್ಯವನ್ನು ದಯಪಾಲಿಸಿದ ರಂಗಮನ್ನಾರ್. ಸರ್ವವೇದಸಾರ, ಮುನಿಪುಂಗವರ ತತ್ತ್ವವಿಚಾರ ತಿರುಪ್ಪಾವೈ ಎಂಬ ಸುಂದರ ರಸಕಾವ್ಯದ ರಚನೆ ಮಾಡಿ, ವಿಶ್ವಂ ರಂಗನಾಥಮಯಂ ಎಂದು ಸಾರಿ, ರಂಗನಾಥನಲ್ಲೇ ಐಕ್ಯವಾದ ಗೋದಾದೇವಿಯ ದರ್ಶನ. ಮೂಲ ಮೂರ್ತಿಗಳ ಮುಂದೆ ಸರ್ವಾಲಂಕಾರಯುಕ್ತವಾದ ದೊಡ್ಡ ಉತ್ಸವ ಮೂರ್ತಿ. ಗರ್ಭಾಲಯದ ಮುಂದೆ ಊಂಜಲ್ ಮಂಟಪದಲ್ಲಿ ಸುಲಗ್ನಾ ಸಾವಧಾನ ಸುಮುಹೂರ್ತಾ ಸಾವಧಾನ ಎಂಬ ಲಗ್ನಾಷ್ಟಕಗಳ ಧ್ವನಿ ತರಂಗಗಳ ನಡುವೆ ಸರ್ವಾಲಂಕೃತಳಾದ ಗೋದೆಯ ಕೈಹಿಡಿದ, ಸಮಸ್ತ ದೇವಗಣ ಮೌಳಿರತ್ನ ಕಿರೀಟ ಪ್ರಭಾಪಟಲ ವಿರಾಜಮಾನ ನಿಜಪದ ಯುಗಳಸ್ಯ, ನೂಪುರ ಪೀತಾಂಬರ ಶ್ರೀವತ್ಸಕೌಸ್ತುಭ ಮಕರ ಕುಂಡಲ ಕೇಯೂರ ಹಾರ ಸುದರ್ಶನ ಪಾಂಚಜನ್ಯ ಪದ್ಮಾಂಕಿತ ಪರಿಶೋಭಿತಸ್ಯ, ಕನಕ ಕಮಲ ಕಲ್ಹಾರ ತುಲಸೀ ಪುನ್ನಾಗ ಜಾಜೀ ಚಂಪಕಾದಿ ನಾನಾವಿಧ ಪುಷ್ಪಮಾಲಾಂಕೃತಸ್ಯ, ಶ್ರೀರಂಗನಾಥನ ಕಲ್ಯಾಣ ಮಹೋತ್ಸವದಲ್ಲಿ ಗರುಡಾಂಶ ಸಂಭೂತ ವಿಷ್ಣುಚಿತ್ತರ ಕನ್ಯಾದಾನದ ಸುಂದರ ದೃಶ್ಯ ಮನಸ್ಸಿನ ಚಕ್ಷುಗಳ ಮುಂದೆ.

**ಕುಟುಂಬ ವೃದ್ಧಿಂ ಧನಧಾನ್ಯವೃದ್ಧಿಂ ಸ್ತ್ರಿಯಶ್ಚ ಮುಖ್ಯಾಃ ಸುಖಮುತ್ತಮಂ ಚ ।**
**ಕೃತ್ವಾ ಶುಭಂ ಕಾರ್ಯಮಿದಂ ಮಹಾರ್ಥಂ**
**ಪ್ರಾಪ್ನೋತಿ ಸರ್ವಾಂ ಭುವಿ ಚಾರ್ಥಸಿದ್ಧಿಮ್ ॥**
**ಆಯುಷ್ಯಮಾರೋಗ್ಯಕರಂ ಯಶಸ್ಯಂ ಸೌಭ್ರಾತೃಕಂ ಬುದ್ಧಿಕರಂ ಶುಭಂ ಚ ।**

**ಏವಮೇತತ್ಪರಾವೃತ್ತಂ ಕಲ್ಯಾಣಂ ಭದ್ರಮಸ್ತು ವಃ ।**

**ಪ್ರವ್ಯಾಹರತಿ ವಿಸ್ರಬ್ಧಂ ಬಲಂ ವಿಷ್ಣೋಃ ಪ್ರವರ್ಧತಾಮ್ ॥**

**ಬಲಂ ವಿಷ್ಣೋಃ ಪ್ರವರ್ಧತಾಮ್ ಬಲಂ ವಿಷ್ಣೋಃ ಪ್ರವರ್ಧತಾಮ್ ॥**

ನಾರಾಯಣನೆಂಬ ಸರೋವರದಲ್ಲಿ ಮುಳುಗಿ, ಮಾನಸಿಕ ಮಲಗಳನ್ನೆಲ್ಲಾ ಕಳೆದುಕೊಂಡು, ಭಗವದನುಭವ ಪಡೆದ ಮಾನಸಿಕ ಸ್ನಾನದ ಪ್ರಕ್ರಿಯೆ - ಮಾರ್ಹಳಿ ನೀರಾಟ್ಟ ವ್ರತವನ್ನು ನಾವೂ ಸಹ ಗೆಳತಿಯರಾಗಿ ಗೋದಾದೇವಿಯೊಂದಿಗೆ ಆಚರಿಸಿದ ದಿವ್ಯಾನುಭವ. ಪರಮಾತ್ಮನನ್ನು ಪಡೆಯಲು ಉಪಾಯವೂ ಉಪೇಯ(ಫಲ)ವೂ ಆದ ಭಗವನ್ ನಾಮ ಸಂಕೀರ್ತನೆ ಗೋದೆಯೊಂದಿಗೆ.

**ನಾರಾಯಣ ನೀ ನಾಮಮೆ ಗತಿ ಇಕ**
**ಕೋರಿಕಲು ಮಾಕು ಗೊನಸಾಗುಟಕು ॥ ಪಲ್ಲವಿ ॥**

**ಪೈ ಪೈ ಮುಂದಟ ಭವ ಜಲಧಿ**
**ದಾಪು ವೆನುಕ ಚಿಂತಾ ಜಲಧಿ**
**ಚಾಪಲಮು ನಡುಮ ಸಂಸಾರ ಜಲಧಿ**
**ತೇಪ ಏದಿ ಇವಿ ತೆಗನೀದುಟಕು ॥ ನಾರಾಯಣ ॥**
**ಪಂಡೆನು ಎಡಮ ಪಾಪಪು ರಾಶಿ**
**ಅಂಡನು ಗುಡಿನಿ ಪುಣ್ಯಪು ರಾಶಿ**
**ಕೊಂಡನು ನಡುಮ ತ್ರಿಗುಣ ರಾಶಿ – ಇವಿ**
**ನಿಂಡ ಗುಡುಚುಟಕು ನಿಲುಕಡ ಏದಿ ॥ ನಾರಾಯಣ ॥**
**ಕಿಂದಿ ಲೋಕಮುಲು ಕೀಡು ನರಕಮುಲು**
**ಅಂದೇಟಿ ಸ್ವರ್ಗಾಲವೆ ಮೀದ**
**ಚೆಂದಿ ಅಂತರಾತ್ಮ ಶ್ರೀ ವೇಂಕಟೇಶ ನೀ-**
**ಯಂದೆ ಪರಮಪದ ಮವಲ ಮರೇದಿ ॥ ನಾರಾಯಣ ॥**

**ರಂಗನಾಥನ ನೋಡುವ ಬನ್ನಿ।**
**ಶ್ರೀರಂಗನ ದಿವ್ಯ ವಿಮಾನದಲ್ಲಿಹನ ॥**

**ಕಮನೀಯಗಾತ್ರನ ಕರುಣಾಂತರಂಗನ ।**
**ಕಾಮಿತಾರ್ಥವೀವ ಕಲ್ಪವೃಕ್ಷನ**

ಕಮಲದಳ ನೇತ್ರನ | ಕಸ್ತೂರಿರಂಗನ

ಕಾಮಧೇನುವಾದ  ಕಾವೇರಿರಂಗನ || ರಂಗನಾಥನ ॥

ವಾಸುಕಿಶಯನನ ವಾರಿಧಿನಿಲಯನ |

ವಾಸುದೇವ ವಾರಿಜನಾಭನ |

ವಾಸವಾದಿ ಭಕ್ತ ಹೃದಯಾಂಬುಜದಲ್ಲಿ

ವಾಸವಾಗಿರುತಿಹ ವಸುದೇವಸುತನ || ರಂಗನಾಥನ ॥

ಮಂಗಳಗಾತ್ರನ ಮಂಜುಳಭಾಷನ |

ಗಂಗಾಜನಕನ ಅಜಪಿತನ|

ಸಂಗೀತಲೋಲನ ಸಾಧುಸಮ್ಮತನ|

ರಂಗವಿಠ್ಠಲನ ರಾಜೀವನೇತ್ರನ || ರಂಗನಾಥನ ॥

ನಾರಾಯಣ ಎಂಬ ನಾಮದ ಬೀಜವನು

ನಾಲಗೆಯ ಕೂರಿಗೆಯ ಮಾಡಿ ಬಿತ್ತಿರಯ್ಯ ॥ ಪ ॥

ತನುವ ನೇಗಿಲು ಮಾಡಿ ಹೃದಯ ಹೊಲವನು ಮಾಡಿತನ್ವಿರಾ ಎಂಬ ಎರಡೆತ್ತ

ಹೂಡಿಜ್ಞಾನವೆಂಬೊ ಮಿಣಿಯ ಕಣ್ಣಿ ಹಗ್ಗವ ಮಾಡಿಧ್ಯಾನವೆಂಬ ಧಾನ್ಯವ ನೋಡಿ ಬಿತ್ತಿರಯ್ಯ॥

ಕಾಮಕ್ರೋಧಗಳೆಂಬ ಗಿಡಗಳನು ತರಿಯಿರಯ್ಯ

ಮದಮತ್ಸರವೆಂಬ ಪೊದೆಯ ಇರಿಯಿರಯ್ಯ

ಪಂಚೇಂದ್ರಿಯಗಳೆಂಬ ಮಂಚಿಕೆಯ ಹಾಕಿರಯ್ಯ

ಚಂಚಲವೆಂಬ ಹಕ್ಕಿಯ ಓಡಿಸಿರಯ್ಯ ॥

ಉದಯಾಸ್ತಮಾನವೆಂಬ ಎರಡು ಕೊಳಗವ ಮಾಡಿ ಆಯುಶ್ಯದ ರಾಶಿಯನು ಅಳೆಯಿರಯ್ಯ

ಇದು ಕಾರಣ ಕಾಗಿನೆಲೆಯಾದಿಕೇಶವನ ಮುದದಿಂದ ನೆನೆನೆನೆದು ಸುಖಿಯಾಗಿರಿಯ್ಯ॥

ಭಾವಮುಲೋನಾ ಬಾಹ್ಯಮುನಂದುನು ।

ಗೋವಿಂದ ಗೋವಿಂದಯನಿ ಕೊಲುವವೋ ಮನಸಾ ॥

ಹರಿ ಯವತಾರಮುಲೇ ಯಖಿಲ ದೇವತಲು

ಹರಿ ಲೋನಿವೇ ಬ್ರಹ್ಮಾಂಡಂಬುಲು ।

ಹರಿ ನಾಮಮುಲೇ ಅನ್ನಿ ಮಂತ್ರಮುಲು

ಹರಿ ಹರಿ ಹರಿ ಹರಿ ಯನವೋ ಮನಸಾ ॥

ಭಾವಮುಲೋನಾ ಬಾಹ್ಯಮುನಂದುನು ..(ಪ..)

ವಿಷ್ಣುನಿ ಮಹಿಮಲೇ ವಿಹಿತ ಕರ್ಮಮುಲು

ವಿಷ್ಣುನಿ ಪೊಗಡೆಡಿ ವೇದಂಬುಲು ।

ವಿಷ್ಣುಡೊಕ್ಕಡೇ ವಿಶ್ವಾಂತರಾತ್ಮುಡು

ವಿಷ್ಣುವು ವಿಷ್ಣುವನಿ ವೆದಕವೋ ಮನಸಾ ॥

ಭಾವಮುಲೋನಾ ಬಾಹ್ಯಮುನಂದುನು ..(ಪ..)

ಅಚ್ಯುತುಡಿತಡೇ ಆದಿಯು ನಂತ್ಯಮು

ಅಚ್ಯುತುಡೇ ಯಸುರಾಂತಕುಡು ।

ಅಚ್ಯುತುಡು ಶ್ರೀವೇಂಕಟಾದ್ರಿನಿಲಯನಿಧೆ

ಅಚ್ಯುತ ಯಚ್ಯುತ ಶರಣನವೋ ಮನಸಾ ॥

ಭಾವಮುಲೋನಾ ಬಾಹ್ಯಮುನಂದುನು

ಗೋವಿಂದ ಗೋವಿಂದಯನಿ ಕೊಲುವವೋ ಮನಸಾ ॥

ಹರಿ ಕೃಷ್ಣಾಚ್ಯುತ ಗೋವಿಂದ ವಾಸುದೇವ | ನರಹರಿ ಎನಬಾರದೆ ॥ ಪ ॥

ಉದಯಕಾಲದಿ ಏಳುತ - ಸಿರಿಯರಸನ | ಒದಗಿ ಸೇವೆಯ ಮಾಡುತ ॥

ತದನಂತರ ಭೋಜನದಲಿ ಸ್ಮರಿಸುತ |

ಮದಗಜಗಮನೆಯೊಳ್ ಸರಸವಾಡುತಲೊಮ್ಮೆ ॥

ಸಿರಿ ಬಂದಡಸಿದಾಗ - ಮೆರೆಯದಿರು | ಹಿರಿ ಹಿರಿ ಹಿಗ್ಗದಿರು ||

ನೆರೆ ಬಡತನಕೆ ಜರ್ಜರಿತನಾದೆ ನೀನು ।

ಹರಿನಾಮಸ್ಮರಣೆಯ ಮರೆಯದಿರೆಲೊ ಮನುಜ ॥

ದುಷ್ಟರುಪದ್ರದೊಳಾಗಲಿ - ರಣರಂಗದ |

ದಿಟ್ಟ ಸಮರದೊಳಾಗಲಿ || ಕಟ್ಟಾರಣ್ಯದೊಳು ಹುಲಿಯು ಬಾಧಿಸುತಿರೆ |

ಸೃಷ್ಟಿಗೊಡೆಯ ಶ್ರೀಪುರಂದರವಿಠಲ ಕಾಯ್ವ ॥

ಪಾಪೋಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ

ತ್ರಾಹಿಮಾಂ ಕೃಪಯಾ ದೇವ, ಶರಣಾಗತ ವತ್ಸಲ

**ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ,**

**ತಸ್ಮಾತ್ ಕಾರುಣ್ಯ ಭಾವೇನ ರಕ್ಷ ರಕ್ಷ ಜನಾರ್ಧನಾ**

**ರಕ್ಷ ರಕ್ಷ ಪುರುಷೋತ್ತಮಾ ರಕ್ಷ ರಕ್ಷ ಪರಂಧಾಮಾ ॥**

ಭಗವಂತನ ಕಲ್ಯಾಣ ಗುಣಗಳನ್ನು ಹಾಡುತ್ತಾ ಹಾಡುತ್ತಾ, ಅವನ ಚಿಂತನೆ ಮಾಡುತ್ತಾ ಮಾಡುತ್ತಾ, ನಮ್ಮ ಹಿಂದಿನ ಇಂದಿನ ಮುಂದಿನ ಪಾಪಗಳೆಲ್ಲಾ ಬೆಂಕಿಯಲ್ಲಿ ಸುಟ್ಟ ಹತ್ತಿಯಂತೆ ಬೆಂದು ಸಂಪೂರ್ಣವಾಗಿ ನಾಶವಾಗಿ, ನಮ್ಮ ಹೃದಯವು ಪರಿಶುದ್ಧವಾಗಿ, ಭಗವದ್ಭಕ್ತಿ ಉಂಟಾಗಿ, ನಾವು ಅವನ ಕೃಪೆಗೆ ಪಾತ್ರರಾಗಿ, ಪರಮಾತ್ಮನಲ್ಲಿ ಶರಣಾಗತಿ ಹೊಂದುವ ಹಾದಿಯಲ್ಲಿ ನಾವು ಇಡುತ್ತಿರುವ ಹೆಜ್ಜೆಗಳು ನಮ್ಮನ್ನು ಅಜ್ಞಾನದ ನಿದ್ರೆಯಿಂದ ಎಚ್ಚರಿಸಿ, ಭಗವನ್ನಾಮ ಸಂಕೀರ್ತನೆ ಮಾಡುವಂತೆಯೂ, ಕೆಟ್ಟ ಕೆಲಸಗಳನ್ನು ಮಾಡದೇ, ದುಷ್ಟ ಮಾತುಗಳನ್ನಾಡದೇ ಮನಸ್ಸನ್ನು ಪರಿಶುದ್ಧವಾಗಿ ಇಟ್ಟುಕೊಂಡು ಶಾಂತಚಿತ್ತರಾಗಿ, ವೈರಾಗ್ಯದಿಂದ ಬಾಳುವಂತೆಯೂ, ಭಗವಂತನ ದಿವ್ಯ ಸಂಬಂಧ ಜ್ಞಾನವುಂಟಾಗಿ ನಮಗೆ ಕೈಂಕರ್ಯ ಪುರುಷಾರ್ಥದ ಅನುಗ್ರಹ ದೊರೆಯಲೆಂದೂ ಪರಮಾತ್ಮನಲ್ಲಿ ಪ್ರಾರ್ಥನೆ ಸಲ್ಲಿಸುತ್ತಾ,

**ಓಂ ಸ್ವಸ್ತಿ ಪ್ರೀಣಾತು ಪ್ರೀಯತಾಂ ಭಗವಾನ್ ಗೋದಾಸಮೇತ ಶ್ರೀರಂಗನಾಥಃ ।**

**ಜಗತಾಮಖಿಲ ದುರಿತ ಶಮನಮಸ್ತು ।**


**ಓಂ ಶಾಂತಿರಸ್ತು । ತುಷ್ಟಿರಸ್ತು । ಪುಷ್ಟಿರಸ್ತು । ವೃದ್ಧಿರಸ್ತು ।**

**ಅವಿಘ್ನಮಸ್ತು । ಆಯುಷ್ಯಮಸ್ತು । ಆರೋಗ್ಯಮಸ್ತು ।**

**ಅಚಲ ಮಹದೈಶ್ವರ್ಯ ಸಮೃದ್ಧಿರಸ್ತು ॥**

**ಓಂ ಶಾಂತಿಃ ಶಾಂತಿಃ ಶಾಂತಿಃ ॥**






POTHYS

